ತ್ರೈಮಾಸಿಕ

# ಬೃಂದಾವನ ವಾಣಿ

ಸಂಚಿಕೆ 54

ಬೃಂದಾವನ ಕನ್ನಡ ಕೂಟ, ನ್ಯೂ ಜೆರ್ಸಿ

ಜನವರಿ , ೨೦೨೬




KARNATAKA CULTURAL ORGANIZATION BRINDAVANA (KCOB) NJ, USA

## ಬೃಂದಾವನ ಕನ್ನಡ ಕೂಟ, ನ್ಯೂ ಜೆರ್ಸಿ

ಸುಮಧುರ ಸ್ನೇಹ ಸಮ್ಮಿಲನ ನಮ್ಮೀ ಬೃಂದಾವನ

# ಪರಿವಿಡಿ


- ಸಂಪಾದಕೀಯ....................3
- ಸಂಪಾದಕೀಯ ತಂಡ....................4
- ಅಧ್ಯಕ್ಷರ ನುಡಿ....................5
- ಜ್ಞಾನ ದೀವಿಗೆ....................6
- ರಾಜ್ಯೋತ್ಸವ....................7
- ಮಕ್ಕಳೋತ್ಸವ....................9
- ಕಲ್ಯಾಣೋತ್ಸವ....................12
- ಪ್ರವಾಸ ಕಥನ....................14
- ಋತುಗಳು....................16
- ಪ್ರೀತಿ–ಪ್ರೇಮ....................17

**ಕಥಾ ಸಂಕಲನ**

- ನಿಕ್ಷೇಪ....................20

**ಕವನ ಸಂಕಲನ**

- ಲಾಜವಂತಿ....................26
- ಸೌರಮಂಡಲ....................27
- ನಾನು ಹೆಣ್ಣಾಗಬಾರದಿತ್ತೇ?....................28

**ಅಡಿಗೆ ಅರಮನೆ**

- ಬಿಳಿ ಹೋಳಿಗೆ ....................30
- ಕ್ಯಾಪ್ಸಿಕಂ ಕರಿ....................31

- ಚಿಣ್ಣರ ಲೋಕ....................32
- ಕ್ಯಾಮರಾ ಕಣ್ಣಲ್ಲಿ....................38
- ಅನಿಸಿಕೆ–ಅಭಿಪ್ರಾಯ....................41



# ಸಂಪಾದಕೀಯ

“ಎಲ್ಲಾದರೂ ಇರು, ಎಂತಾದರೂ ಇರು, ಎಂದೆಂದಿಗೂ ನೀ ಕನ್ನಡವಾಗಿರು” ಎಂಬ ನಮ್ಮ ಕುವೆಂಪು ಅವರ ಅಮರ ವಾಕ್ಯದಂತೆ, ಅಮೆರಿಕದ ನ್ಯೂ ಜರ್ಸಿಯಲ್ಲಿ ಕನ್ನಡದ ಕಂಪನ್ನು ಹರಡಿಸುತ್ತಿರುವ ಬೃಂದಾವನ ವಾಣಿಯ ೫೪ನೇ ಸಂಚಿಕೆಗೆ ನಿಮ್ಮೆಲ್ಲರಿಗೂ ಆದರದ ಸ್ವಾಗತ.

ಸಮಸ್ತ ಕನ್ನಡಾಭಿಮಾನಿ ಬಂಧುಗಳಿಗೂ ಹಾಗೂ ಬೃಂದಾವನ ವಾಣಿಯ ಎಲ್ಲ ಓದುಗರಿಗೂ, ಬೃಂದಾವನ ಕನ್ನಡ ಕೂಟದ ಸಂಕಲ್ಪ ತಂಡದ ಪರವಾಗಿ ಕನ್ನಡ ರಾಜ್ಯೋತ್ಸವ ಮತ್ತು ಉತ್ಥಾನ ದ್ವಾದಶಿ–ತುಳಸಿ ಹಬ್ಬದ ಹಾರ್ದಿಕ ಶುಭಾಶಯಗಳು.

ಕನ್ನಡ ರಾಜ್ಯೋತ್ಸವ ಎಂದರೆ ನನಗೆ ಶಾಲಾ ದಿನಗಳು ನೆನಪಿಗೆ ಬರುತ್ತವೆ. ನಿಬಂಧ ಬರಹ ಮತ್ತು ಭಾಷಣ ಸ್ಪರ್ಧೆಗಳ ಸಿದ್ಧತೆ, ಅವುಗಳಲ್ಲಿನ ಉತ್ಸಾಹ, ಇಂದಿಗೂ ಹೃದಯದಲ್ಲಿ ಹಸಿರಾಗಿದೆ. ಈಗಿನಂತೆ ಆಗ ವಿಷಯ ಸಂಗ್ರಹಣೆಗೆ Google, ChatGPT ಮುಂತಾದ AI ಸೌಲಭ್ಯಗಳಿರಲಿಲ್ಲ. ಆದ್ದರಿಂದ ನಾನು ನನ್ನ ತಂದೆಯವರ ಜೊತೆ ರಾಜ್ಯೋತ್ಸವದ ಇತಿಹಾಸದ ಕುರಿತು ಚರ್ಚಿಸಿ, ಅವರು ಹೇಳಿದ ಅಂಶಗಳನ್ನು ಬರೆದುಕೊಂಡ ಆ ಕ್ಷಣಗಳು ಇಂದಿಗೂ ತುಂಬಾ ಅರ್ಥಪೂರ್ಣವೆನಿಸುತ್ತವೆ.

ಹಾಗಾದರೆ ಕನ್ನಡ ರಾಜ್ಯೋತ್ಸವದ ಹಿನ್ನೆಲೆಯನ್ನು ಸ್ವಲ್ಪ ಮೆಲಕು ಹಾಕೋಣ. ೧೯೫೬ರ ನವೆಂಬರ್ ೧ ರಂದು ದಕ್ಷಿಣ ಭಾರತದ ವಿವಿಧ ಕನ್ನಡಭಾಷಿಕ ಪ್ರದೇಶಗಳನ್ನು ಒಟ್ಟುಗೂಡಿಸಿ ಮೈಸೂರು ರಾಜ್ಯವನ್ನು ರಚಿಸಲಾಯಿತು. ೧೯೭೩ರಲ್ಲಿ ಈ ರಾಜ್ಯಕ್ಕೆ ಕರ್ನಾಟಕ ಎಂಬ ನಾಮಕರಣ ನಡೆಯಿತು. ಈ ದಿನವನ್ನು ಕನ್ನಡಿಗರು ಅತ್ಯಂತ ಹೆಮ್ಮೆ ಮತ್ತು ಗೌರವದಿಂದ ಕನ್ನಡ ರಾಜ್ಯೋತ್ಸವವಾಗಿ ಆಚರಿಸುತೇವೆ. ರಾಜ್ಯದ ಎಲ್ಲೆಡೆ ಕನ್ನಡ ಧ್ವಜಾರೋಹಣ, ಸಾಂಸ್ಕೃತಿಕ ಕಾರ್ಯಕ್ರಮಗಳು, ಪದಕ ಪ್ರದಾನಗಳು ನಡೆಯುತ್ತವೆ. ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಗಣ್ಯರಿಗೆ ರಾಜ್ಯ ಸರ್ಕಾರದಿಂದ ರಾಜ್ಯೋತ್ಸವ ಪ್ರಶಸ್ತಿಗಳು ಪ್ರದಾನವಾಗುತ್ತವೆ.

ಇನ್ನು ತುಳಸಿ ವಿವಾಹ ಅಥವಾ ಉತ್ಥಾನ ದ್ವಾದಶಿ ಕೂಡ ನನ್ನ ಬಾಲ್ಯದ ನೆನಪುಗಳನ್ನು ಮರುಕಳಿಸುತ್ತದೆ. ತುಳಸಿ ಲಗ್ನದ ಹಿಂದಿನ ದಿನ, ಅಜ್ಜಿಯ ಜೊತೆಗೆ ತುಳಸಿ ವೃಂದಾವನಕ್ಕೆ ಸುಣ್ಣ ಬಳಿದು, ಅದರ ಮೇಲೆ ಕೆಂಪು ಬಣ್ಣದಲ್ಲಿ “ಶ್ರೀ ರಾಧಾ ಕಾರ್ತೀಕ ದಾಮೋದರ ಪ್ರಸನ್ನ” ಎಂದು ಶ್ರೀಕಾರ ಬರೆಯುವುದು, ಬಾಳೆದಿಂಡು ಮತ್ತು ನೆಲ್ಲಿಕಾಯಿಯ ರೆಂಬೆಗಳಿಂದ ಅಲಂಕಾರ ಮಾಡುವುದು ನನ್ನ ಅಚ್ಚುಮೆಚ್ಚಿನ ಕೆಲಸವಾಗಿತ್ತು. ಕಾರ್ತಿಕ ಮಾಸದ ಶುಕ್ಲಪಕ್ಷದ ದ್ವಾದಶಿ (ದೀಪಾವಳಿಯ ನಂತರದ ಹನ್ನೆರಡನೇ ದಿನ) ಯಂದು ಆಚರಿಸುವ ಈ ತುಳಸಿ ವಿವಾಹವು, ವಿಷ್ಣು ಯೋಗನಿದ್ರೆಯಿಂದ ಎದ್ದ ದಿನವೆಂದು ನಂಬಲಾಗುತ್ತದೆ. ತುಳಸಿ ದೇವಿಯ ವಿವಾಹವನ್ನು ವಿಷ್ಣುವಿನ ರೂಪವಾದ ಸಾಲಿಗ್ರಾಮ ಅಥವಾ ಕೃಷ್ಣನೊಂದಿಗೆ ನೆರವೇರಿಸಲಾಗುತ್ತದೆ. ಆಷಾಢ ಏಕಾದಶಿಯಿಂದ ಕಾರ್ತಿಕ ದ್ವಾದಶಿವರೆಗೆ ವಿಷ್ಣು ಯೋಗನಿದ್ರೆಯಲ್ಲಿ ಇರುತ್ತಾರೆ ಎಂಬ ನಂಬಿಕೆಯಿದ್ದು, ಕಾರ್ತಿಕ ದ್ವಾದಶಿಯಂದು ಅವರು ಎದ್ದೇಳುವರೆಂದು, ಈ ದಿನವನ್ನು ಉತ್ಥಾನ ದ್ವಾದಶಿ ಎಂದು ಕರೆಯುತ್ತಾರೆ. ತುಳಸಿ ದೇವಿಯು ಲಕ್ಷ್ಮೀ ದೇವಿಯ ಅವತಾರವಾಗಿದ್ದು, ಈ ದಿನ ವಿಷ್ಣುವಿನೊಂದಿಗೆ ವಿವಾಹವಾಗುತ್ತಾರೆ ಎನ್ನುವುದು ನಮ್ಮ ಪೌರಾಣಿಕ ನಂಬಿಕೆ.

ಈ ಎರಡು ಹಬ್ಬಗಳು—ಒಂದು ಭಾಷೆ ಮತ್ತು ರಾಜ್ಯದ ಹೆಮ್ಮೆ, ಇನ್ನೊಂದು ಧಾರ್ಮಿಕ ನಂಬಿಕೆ ಮತ್ತು ಕಾಲಚಕ್ರದ ಆಚರಣೆ—ಕರ್ನಾಟಕದ ಸಂಸ್ಕೃತಿಯ ವೈವಿಧ್ಯತೆಯನ್ನು ಸುಂದರವಾಗಿ ಪ್ರತಿಬಿಂಬಿಸುತ್ತವೆ. ನಮ್ಮ ಬಾಲ್ಯದ ನಂಟಿನಿಂದ ಬೆಸೆಯಲ್ಪಟ್ಟ ಈ ಹಬ್ಬಗಳೇ, ನಾವು ಸಾಗರದಾಚೆ ಬಂದು ಹಲವು ದಶಕಗಳಾದರೂ ನಮ್ಮ ಸಂಸ್ಕೃತಿ ಮತ್ತು ಪರಂಪರೆಯನ್ನು ಉಳಿಸಿ ಬೆಳೆಸಿಕೊಳ್ಳಲು ಪ್ರೇರಣೆಯಾಗಿವೆ. ಈ ಆಚರಣೆಗಳೇ ಇಂದು ನಮ್ಮ ಜೀವನದ ಅವಿಭಾಜ್ಯ ಅಂಗವಾಗಿದ್ದು, ಮುಂದಿನ ಪೀಳಿಗೆಗೆ ದಾರಿದೀಪವಾಗಿವೆ.

ನಮ್ಮ ಈ ೫೪ನೇ ಬೃಂದಾವನ ವಾಣಿ ಸಂಚಿಕೆ, ವೈವಿಧ್ಯಮಯ ಲೇಖನಗಳು, ಕಥೆಗಳು, ಕವನಗಳು ಹಾಗೂ ರುಚಿಕರವಾದ ಅಡುಗೆ ವಿಧಾನಗಳ ಸಂಕಲನವನ್ನು ನಿಮ್ಮ ಮುಂದಿಟ್ಟಿದೆ. ಓದಿ, ಆನಂದಿಸಿ. ಇಂತಹ ಸುಂದರ ಸಂಚಿಕೆಯನ್ನು ನಿಮ್ಮ ಮುಂದೆ ತರಲು ನಮ್ಮ ಸಂಪಾದಕ ಮಂಡಳಿಯ ಕಠಿಣ ಪರಿಶ್ರಮವೇ ಕಾರಣ.

ನಿಮ್ಮ ಅಮೂಲ್ಯ ಅಭಿಪ್ರಾಯಗಳು ಮತ್ತು ಅಭಿನಂದನೆಗಳನ್ನು ದಯವಿಟ್ಟು brindavanavani@gmail.com ಗೆ ಕಳುಹಿಸಬೇಕಾಗಿ ವಿನಂತಿ.

ಧನ್ಯವಾದಗಳು,

ವಾಣಿ ಗಿರೀಶ್
ಸಾಹಿತ್ಯ ಬೃಂದಾವನ
‘ಸಂಕಲ್ಪ’ ತಂಡ
ಬೃಂದಾವನ ಕನ್ನಡ ಕೂಟ

# ಸಂಪಾದಕೀಯ ತಂಡ



**ಶ್ರೀವಿದ್ಯಾ ಪ್ರಶಾಂತ್**
ಪ್ರಧಾನ ಸಂಪಾದಕರು



**ರೋಹಿಣಿ ಮಹೇಶ್**
ಸಂಚಿಕೆ ವಿನ್ಯಾಸ



**ರಾಗಿಣಿ ದರ್ಶನ್**
ವಿಷಯ ನಿರ್ವಹಣೆ



**ಪಲ್ಲವಿ ಮಂಜುನಾಥ್**
ವಿಷಯ ನಿರ್ವಹಣೆ




**ವಾಣಿ ಗಿರೀಶ್**
ವಿಷಯ ನಿರ್ವಹಣೆ



**ಸೌಮ್ಯ ರವಿ**
ವಿಷಯ ನಿರ್ವಹಣೆ

ಮುಖಪುಟ ಚಿತ್ರ ಕೃಪೆ : ಶ್ರೀವಿದ್ಯಾ ಪ್ರಶಾಂತ್



# ಅಧ್ಯಕ್ಷರ ನುಡಿ

**ನ್ಯೂ**ಜೆರ್ಸಿಯ ಹಿಮಪರ್ವತದ ಚಳಿಯಲ್ಲಿ ಕುಳಿತು ವರ್ಷದಾರಂಭವನ್ನು ಮಾಡುತ್ತಿರುವ ಬೃಂದಾವನದ ಎಲ್ಲಾ ಕನ್ನಡಿಗರಿಗೆ ಶುಭಾಶಯಗಳು.

ನಮ್ಮ "ಸಂಕಲ್ಪ" ತಂಡದ ಮೊದಲ ವರ್ಷದ ಮುಕ್ತಾಯದ ಸಮಯದಲ್ಲಿ ನ್ಯೂಜೆರ್ಸಿಯ ಕನ್ನಡ ಜನತೆಗೆ ನಮ್ಮ ಬೃಂದಾವನ ಬಳಗಕ್ಕೆ , ಪ್ರಾಯೋಜಕರಿಗೆ ,ಜಾಹಿರಾತುದಾರರಿಗೆ , ಮಾರಾಟಗಾರರಿಗೆ ಹಾಗು ಪ್ರತೀ ಕಾರ್ಯಕ್ರಮಕ್ಕೂ ಕೈ ಜೋಡಿಸುವ ಸ್ವಯಂ ಸೇವಕರಿಗೆ, ನಮ್ಮ ತಂಡದ ನಿರ್ದೇಶಕರು , ಉಪಾಧ್ಯಕ್ಷರು , ಕಾರ್ಯಕಾರಿ ಸಮಿತಿಯ ಸದಸ್ಯರೆಲ್ಲರ ಪರವಾಗಿ ತುಂಬು ಹೃದಯದ ಧನ್ಯವಾದಗಳು. ನಿಮ್ಮ ನಿರಂತರ ಸಹಕಾರ ಮತ್ತು ಸೇವೆಯಿಂದ ಈ ವರ್ಷದ ಎಲ್ಲಾ ಕಾರ್ಯಕ್ರಮಗಳು ಅತ್ಯಂತ ಯಶಸ್ವಿಯಾಗಿ ಸಂಪನ್ನಗೊಂಡವು. ಧನ್ಯವಾದಗಳು.

ಬೃಂದಾವನದಲ್ಲಿ ಕನ್ನಡ ರಾಜ್ಯೋತ್ಸವದ ಕಾರ್ಯಕ್ರಮ ಬಹಳ ವಿಜೃಂಭಣೆಯಿಂದ ಎಡಿಸನ್ ಪಾರ್ಕ್ ನಲ್ಲಿ ನಡೆಯಿತು . ಕನ್ನಡ ಬಾವುಟ ಹಾರಿಸುವುದರೊಂದಿಗೆ ಕನ್ನಡ ನಾಡ ಗೀತೆಯನ್ನು ಹಾಡಿ ಎಲ್ಲರು ಕನ್ನಡ ರಾಜ್ಯ ರಚನೆಯ ದಿವಸವನ್ನು ತಾಯಿ ಭುವನೇಶ್ವರಿಯ ಪೂಜೆಯೊಂದಿಗೆ ವಿಶೇಷವಾಗಿ ಆಚರಿಸಿದರು. ಹಲವಾರು ಗಣ್ಯರು ಕನ್ನಡ -ಕರ್ನಾಟಕದ ಬಗ್ಗೆ ರೋಚಕ ವಿಷಯಗಳನ್ನು ಹಂಚಿಕೊಂಡರು. ಹಲವಾರು ರುಚಿ ರುಚಿಯಾದ ಖಾದ್ಯಗಳು ಚಳಿಯಲ್ಲಿ ಬಾಯಿ ನೀರೂರಿಸಿತ್ತು.

ಶ್ರೀ ಗುರುವಾಯೂರಪ್ಪನ ದೇವಸ್ಥಾನದಲ್ಲಿ ನಡೆದ ಭಕ್ತಿ ಲಹರಿ ಕಾರ್ಯಕ್ರಮದಲ್ಲಿ ನಮ್ಮ ಬೃಂದಾವನ ಸದಸ್ಯರು ಭಾಗವಾಗಿಸಿದ್ದರು. ದಾಸ ಸಾಹಿತ್ಯ ಹಾಗು ವಚನ ಸಾಹಿತ್ಯ ಭರಿತವಾದ ಸಂಗೀತ ಧಾರೆ ಹಾಗೂ ನೃತ್ಯಗಳು ಎಲ್ಲರ ಮನ ಸೆಳೆದವು. ಕನ್ನಡಕ್ಕಾಗಿ ಕೈ ಎತ್ತು ನಿನ್ನ ಕೈ ಬಂಗಾರವಾಗುವುದು ಎನ್ನುವ ನುಡಿಯಂತೆ ಕನ್ನಡದವರಿಗಾಗಿ ಮೀಸಲಿಟ್ಟ ಕಾರ್ಯಕ್ರಮದಲ್ಲಿ ಬೃಂದಾವನದ ಮುಂದಾಳತ್ವದಲ್ಲಿ ಕಾರ್ಯಕ್ರಮ ನೆರವೇರಿತು.

ಡಿಸೆಂಬರ್ ತಿಂಗಳಿನಲ್ಲಿ ಮಕ್ಕಳೋತ್ಸವ ಹಾಗೂ ವಾರ್ಷಿಕೋತ್ಸವ ಕಾರ್ಯಕ್ರಮ ತುಂಬಾ ಚೆನ್ನಾಗಿ ಮೂಡಿ ಬಂತು. ಸಾಂಪ್ರದಾಯಿಕವಾದ ಗಣಪತಿ ಪೂಜೆಯೊಂದಿಗೆ ಪ್ರಾರಂಭವಾದ ಕಾರ್ಯಕ್ರಮ, ಗುರು -ಶಿಷ್ಯ ಪರಂಪರೆಯನ್ನು ಸಾಂಪ್ರದಾಯಿಕವಾಗಿ ನೆನೆಪಿಸುವ ರೀತಿಯ ಮಕ್ಕಳ ಗುರುವಂದನಾ ಕಾರ್ಯಕ್ರಮವಂತೂ ಬಹಳ ವಿಶೇಷವಾಗಿತ್ತು. ಎಡಿಸನ್ ಮಕ್ಕಳ ಶಿವಭೂತಿ ,ಈಸ್ಟ್ ವಿಂಡ್ಸರ್ - ಸೌತ್ ಜೆರ್ಸಿ -ಹಿಲ್ಸ್ ಬೋರೋ ಮಕ್ಕಳ ಢಾಣಾ-ಡಂಗುರ , ಮಾರ್ಲ್ ಬೋರೋ ಮಕ್ಕಳಿಂದ ದಸರಾ ಹಬ್ಬ, ಸೌತ್ ಬ್ರುನ್ಸ್ವಿಸ್ಕ್ ಮಕ್ಕಳ ವಿಶ್ವ-ವಿಸ್ಮಯ ರೂಪಕ ಗಳು ತುಂಬಾ ಚೆನ್ನಾಗಿ ಮೂಡಿ ಬಂದವು. ಎಲ್ಲಾ ಶಾಲೆಯ ಮಕ್ಕಳು ಸರಾಗವಾಗಿ ಕನ್ನಡದಲ್ಲಿ ಮಾತಾನಾಡಿದ್ದು ಹಾಗು ಅವರ ಅಭಿನಯ ಎಲ್ಲರ ಮನ ಸೆಳೆಯಿತು. ಮಕ್ಕಳೊಡನೆ, ಶಿಕ್ಷಕರ, ತಂದೆ -ತಾಯಿಯರ ಪರಿಶ್ರಮ ಎದ್ದು ತೋರುತ್ತಿತ್ತು. ವಿಶೇಷ ಅತಿಥಿಯಾಗಿ ಶ್ರೀಮತಿ ಗಾಯಿತ್ರಿ ಅನಂತ್ ನಾಗ್ ಅವರ ಉಪಸ್ಥಿತಿ ಕಾರ್ಯಕ್ರಮಕ್ಕೆ ಹೆಚ್ಚಿನ ಮೆರಗು ಕೊಟ್ಟಿತ್ತು. ಮತ್ತೊಮ್ಮೆ ಊಟೋಪಚಾರ ಎಲ್ಲರ ಮೆಚ್ಚುಗೆ ಗಳಿಸಿತು.

ಒಂದು ವಿಶ್ವ - ಒಂದು ಹೃದಯ - heartfulness ಅವರೊಡನೆ ಬೃಂದಾವನ ವಿಶ್ವ ಧ್ಯಾನ ದಿನವನ್ನು ಆಚರಿಸಿತು. ಜಾಗತಿಕ ಶಾಂತಿಗಾಗಿ ನಡೆದ ಈ ಕಾರ್ಯಕ್ರಮ ಅತ್ಯಂತ ಯಶಸ್ವಿಯಾಗಿ ನಡೆಯಿತು.

ಹೊಸ ವರ್ಷದಲ್ಲಿ ಹೊಸ ಹೊಸ ಯೋಜನೆಯೊಡನೆ ಬರಲಿದ್ದೇವೆ . ನಿಮ್ಮ ಸಹಕಾರ ನಿರಂತರವಾಗಿರಲಿ.

ನಿಮ್ಮೆಲ್ಲರಿಗೂ ಹೊಸ ವರ್ಷದ ಶುಭಾಶಯಗಳು . 2026 ರ ವರ್ಷ ಎಲ್ಲರಿಗೂ ಶುಭವನ್ನು ತರಲಿ ಎಂದು ಹಾರೈಸುತ್ತಾ ಮತ್ತೊಮ್ಮೆ ಭೇಟಿಯಾಗೋಣ.

ನಿಮ್ಮ

ಸುನೀಲ್ ಹುಲಿಕೆರೆ,<br>
ಅಧ್ಯಕ್ಷರು,<br>
"ಸಂಕಲ್ಪ ತಂಡ",<br>
ಬೃಂದಾವನ ಕನ್ನಡ ಕೂಟ, ನ್ಯೂ ಜೆರ್ಸಿ.



**ಶ್ರೀ ಯೋಗೀಂದ್ರ ಭಟ್ ಉಳಿ**
ಶ್ರೀ ಕೃಷ್ಣ ವೃಂದಾವನ, ನ್ಯೂ ಜೆರ್ಸಿ

# ಏನೇ ಬರಲಿ, ಎದುರಿಸುವ ಸ್ಥೈರ್ಯವಿರಲಿ

**ಅ**ನುದಿನವೂ ಆಕಸ್ಮಿಕವಾಗಿ ಎದುರುಗೊಳ್ಳುವ ಸವಾಲುಗಳನ್ನು ನಿವಾರಿಸಿಕೊಂಡು ಮುನ್ನಡೆಯುವುದೇ ನಮ್ಮ ಜೀವನ ಯಾನ. ದಟ್ಟಕಾಡಿನೊಳಗಿನ ಪಯಣ. ಏನು ಬಂದರೂ ಎದೆಗುಂದದೆ ಎದುರಿಸಿ ಗೆದ್ದವನದ್ದು ಸಾರ್ಥಕಜೀವನ. ಎಲ್ಲದಕ್ಕೂ ಹೆದರಿ ಹಿಂಜರಿದವನದ್ದು, ಏನನ್ನೂ ಸಾಧಿಸದೆ ಸುಮ್ಮನೆ ತಿಂದುಂಡು ಬೆದರಿ ಕುಳಿತವನದ್ದು ವ್ಯಥಾ ಕಾಲಹರಣ.

ಹಿಂದಿನ ಕಾಲದವರಿಗಿದ್ದಂತಹ ಕಷ್ಟಗಳು, ಸವಾಲುಗಳು ಖಂಡಿತವಾಗಿಯೂ ಈಗಿನವರಿಗಿಲ್ಲ. ಆದರೆ ಅವುಗಳಿಗೆ ಹೋಲಿಸಿನೋಡಿದರೆ ಈಗಿನ ಕಾಲದವರ ನವನವೀನ ಸಮಸ್ಯೆಗಳೇನೂ ಕಡಿಮೆಯದ್ದಲ್ಲ! ಹಾಗಾಗಿ ಯಾವುದನ್ನೂ ಸುಮ್ಮನೆ ನಿರಾಕರಿಸಿ ನಿಮಗೇನೂ ಸಮಸ್ಯೆಗಳೇ ಇಲ್ಲವೆಂಬಂತೆ, ಇದ್ದರೂ ಅದು ದೊಡ್ಡದಲ್ಲವೆಂಬಂತೆ ಪರರ ಸಂಕಷ್ಟಗಳನ್ನು ನಿರ್ಲಕ್ಷಿಸಿಸುವುದೂ ಸರಿಯಲ್ಲ. ಪ್ರಸಕ್ತ ಕಾಲದಲ್ಲಿ ಸಮಸ್ಯೆಗಳ ಸ್ವರೂಪಗಳು ಬದಲಾಗಿರಬಹುದೇ ಹೊರತು ಅವುಗಳ ಅಸ್ತಿತ್ವವಲ್ಲ. ಸವಾಲುಗಳಂತೂ ಯಾವತ್ತಿಗೂ ಎಲ್ಲರಿಗೂ ಇದ್ದೇ ಇರುತ್ತವೆ. ಅವುಗಳನ್ನು ಯಥವತ್ತಾಗಿ ಸ್ವೀಕರಿಸಿ ಎದುರಿಸಿ ಗೆದ್ದು ಬರಲು ಉತ್ತೇಜಿಸುವುದಷ್ಟೇ ನಮ್ಮ ಸಹಪಯಣಿಗರಿಗೆ ನಾವು ನೀಡಬಹುದಾದ ಸಹಾಯಧನ.

ನಮ್ಮ ಬದುಕಿನ ಯಾತ್ರೆಯಲ್ಲಿ ಬಂದೊದಗುವ ಸಹಪಯಣಿಗರು ಸಹ ನಮ್ಮಷ್ಟೇ ಅಮಾಯಕರು. ಅಸ್ವತಂತ್ರರು. ಅವರು ನಮ್ಮ ಸಮೀಪಬಂಧುಗಳಾಗಿರಬಹುದು. ದೀರ್ಘಕಾಲದ ಮಿತ್ರರಾಗಿರಬಹುದು. ಶತ್ರುಗಳಾಗಿರಬಹುದು. ಅಥವಾ ಅಲ್ಪಕಾಲದ ಬಾಂಧವ್ಯದ ಋಣಹೊಂದಿದವರೂ ಆಗಿರಬಹುದು. ಅವರ ಸಾಂಗತ್ಯ, ಸಹಯೋಗ, ಪ್ರೀತಿ, ದ್ವೇಷ, ಸಹಕಾರಾದಿಗಳೆಲ್ಲವೂ ಆಕಸ್ಮಿಕ. ಯಾವಾಗ ಯಾರನ್ನು ನಾವು ಯಾವ ರೀತಿಯಲ್ಲಿ ಎದುರಿಸಲಿದ್ದೇವೆಯೋ ಬಲ್ಲವರು ಯಾರು? ಎಲ್ಲವೂ ಬದಲಾಗುತ್ತದೆ. ಎಲ್ಲರೂ ಬದಲಾಗುತ್ತಾರೆ. ಕಾಲವೇ ಎಲ್ಲವನ್ನೂ ನಿರ್ಧರಿಸುತ್ತದೆ.ಕಾಲವೇ ನಮಗೆ ಎಲ್ಲವನ್ನೂ ಕಲಿಸುತ್ತದೆ. ಸಂಭವಿಸಬಹುದಾದ ಯಾವ ರೀತಿಯ ಸನ್ನಿವೇಶಗಳನ್ನೂ ಎದುರಿಸಲು ಸನ್ನದ್ಧರಾಗಿರುವುದಷ್ಟೇ ನಾವು ಚಿಂತಿಸಬಹುದಾದ ಪೂರ್ವಸಿದ್ಧತೆ.

ಕಷ್ಟಗಳು ಹೇಳಿ ಕೇಳಿ ಬರುವುದಿಲ್ಲ. ಸುಖಗಳೂ ಅಷ್ಟೇ. ಹಾಗೆ ಬಂದ ಸುಖ ದುಃಖಗಳು ಯಾರ ಬಳಿಯೂ ಶಾಶ್ವತವಾಗಿ ಉಳಿಯುವುದೂ ಇಲ್ಲ. ನಮ್ಮ ಸುತ್ತ ಮುತ್ತಲಿದ್ದವರಲ್ಲೇ ಕೆಲವರು ಇದ್ದಕ್ಕಿದ್ದಂತೆ ಸಿರಿವಂತರಾಗುವುದುಂಟು. ಮತ್ತೆ ಕೆಲವರು ಲೋಕ ಪ್ರಸಿದ್ಧರಾಗುವುದೂ ಉಂಟು. ಹೀಗೆ ನಮ್ಮ ಸುತ್ತಲೂ ನಡೆಯುವ ಇಂತಹ ಆಕಸ್ಮಿಕಗಳೂ ನಮ್ಮನ್ನು ನಿರಾಶರನ್ನಾಗಿಸಬಾರದು. ಸಾವು ದುಃಖಗಳೂ ಹಾಗೆಯೇ ಅಲ್ಲವೇ? ತಿಳಿ ನೀರಿನ ಮೇಲಿನ ಗುಳ್ಳೆಯಂತೆ ಎಲ್ಲಿ ಯಾವಾಗ ಗೋಚರಿಸುತ್ತದೋ ಬಲ್ಲವರಾರು? ನಮಗೆ ಲಭ್ಯವಾದ ಸುಖ,ಸಂತೋಷಗಳನ್ನು ಸಂತೃಪ್ತಿಯೊಂದಿಗೆ ಸ್ವೀಕರಿಸಿ ನೆಮ್ಮದಿಯಿಂದಿರಲು ಕಲಿಯಬೇಕು. ನಾಳೆ ಏನಾಗುತ್ತದೋ ಯಾರಿಗೇನು ಗೊತ್ತು? ಏನಾದರಾಗಲಿ, ಅದನ್ನು ನಾಳೆ ನೋಡೋಣ. ಇಂದು ನೆಮ್ಮದಿಯಿಂದ ನಿದ್ರಿಸೋಣ ಎಂಬ ಮನೋಭಾವ ನಮ್ಮದಾಗಬೇಕು.

ಅಂಜಿಕೆ ಇಲ್ಲದ ಆಗಸದಂತೆ ನಮ್ಮ ಸದಾಶಯಗಳೂ ಅನಂತವಾಗಿರಬೇಕು. ಇಂದಲ್ಲ ನಾಳೆ ನಾವೂ ಯಶಸ್ಸನ್ನು ಖಂಡಿತವಾಗಿಯೂ ಸಾಧಿಸಲೆದ್ದೇವೆ ಎಂಬ ಭರವಸೆ ಸುದೃಢವಾಗಿರಬೇಕು. ಎಷ್ಟೇ ದೊಡ್ಡ ಸವಾಲುಗಳು ನಮ್ಮ ಮುಂದೆ ಬಂದೊದಗಿದರೂ ನಾವು ಧೃತಿಗೆಡಬಾರದು. ಸೋಲೊಪ್ಪಿಕೊಳ್ಳಬಾರದು. ಪರಿಹಾರವಿರದ ಸಮಸ್ಯೆಗಳೇ ಇಲ್ಲ ಈ ಪ್ರಪಂಚದಲ್ಲಿ ಎಂಬ ಸತ್ಯವನ್ನು ನಮ್ಮ ಮನಸ್ಸು ಮತ್ತೆ ಮತ್ತೆ ದೃಢಪಡಿಸಿಕೊಳ್ಳಬೇಕು. ನಮ್ಮ ಪ್ರಾಮಾಣಿಕತೆಗೆ, ಪ್ರಯತ್ನಕ್ಕೆ ದೇವರ ಅನುಗ್ರಹ ಆಗಿಯೇ ಆಗುತ್ತದೆ ಎಂಬ ನಂಬಿಕೆಯೂ ಅಚಲವಾಗಿರಬೇಕು.

ಸದಾ ಋಣಾತ್ಮಕ ಚಿಂತನೆಯಿಂದ ಪೀಡಿತವಾದ ಮನಸ್ಸಿಗೆ ಎಲ್ಲವೂ ಅಪಾಯಕಾರಿಯಾಗಿಯೇ ಗೋಚರಿಸುತ್ತದೆ. ಎಲ್ಲೋ ಸಂಭವಿಸಿದ ದುರಂತಗಳು, ಯಾರಿಗೋ ಪ್ರಾಪ್ತವಾದ ದುಃಖಗಳು ನಾಳೆ ನಮಗೂ ಬರಬಹುದೇನೋ ಎಂಬ ಅನಗತ್ಯ ಯೋಚನೆಗಳೇ ನಮಗೆ ನರಕಾನುಭವವನ್ನು ತಂದುಕೊಡುವುದು. ನಾವೇನೂ ಅಂತಹ ಪಾಪಕೃತ್ಯಗಳನ್ನು ಮಾಡಿದವರಲ್ಲ, ಖಂಡಿತವಾಗಿಯೂ ನಾವು ನಂಬಿದ ದೇವರು ನಮ್ಮ ಕೈ ಬಿಡುವುದಿಲ್ಲ ಎಂಬ ಧೋರಣೆ ನಮ್ಮನ್ನು ಧನಾತ್ಮಕವಾಗಿ ಯೋಚಿಸುವಂತೆ ಮಾಡುತ್ತದೆ. ಸಂಭಾವ್ಯ ಸುಖದ ಕಲ್ಪನೆ ಮತ್ತು ಸುಂದರ ಕನಸುಗಳು ನಮಗೆ ಆನಂದದ ಅನುಭೂತಿಯನ್ನು ತಂದುಕೊಡುತ್ತವೆ. ಹೀಗೆ ಸುಂದರ ಚಿಂತನೆಗಳೊಂದಿಗಿನ ಸಹವಾಸದಿಂದ ನಮ್ಮ ಜೀವನದ ಕಷ್ಟಮಯ ಸಮಯವೂ ಅನಾಯಾಸವಾಗಿ ಕಳೆದು ಹೋಗುತ್ತದೆ.



**ರಮೇಶ್ ಭಟ್**
ನ್ಯೂ ಜೆರ್ಸಿ

# ಕನ್ನಡ ರಾಜ್ಯೋತ್ಸವ – 2025 @ ಬೃಂದಾವನ ಕನ್ನಡ ಕೂಟದ ಸ್ಮರಣೀಯ ಸಂಭ್ರಮ

**ಸಂ**ಕಲ್ಪ ತಂಡವು ೨೦೨೫ ರ ಕನ್ನಡ ರಾಜ್ಯೋತ್ಸ್ವವನ್ನು ಎಡಿಸನ್ ಪಾರ್ಕ್‌ನಲ್ಲಿ ಆಚರಿಸಲು ತೀರ್ಮಾನ ಮಾಡಿತು, ನಿರ್ದೇಶಕರುಗಳ ಸಲಹೆಯ ಮೇರೆಗೆ ಉಪಹಾರದ ಪಾಟ್ಲಕ್ ಅನ್ನು ಜೊತೆಗೆ ಆಯೋಜಿಸುವ  ತೀರ್ಮಾನವನ್ನು ತೆಗೆದುಕೊಂಡಿತು. ಅದರ ಪ್ರಕಾರ ಬೃಂದಾವನದ  ಸದಸ್ಯರುಗಳಿಗೆಲ್ಲ ಕರೆಯೋಲೆಯನ್ನ ಕಳುಹಿಸಲಾಯಿತು,  ಅದರಲ್ಲಿ ಸದಸ್ಯರು ತಮ್ಮ ಇಷ್ಟದ ಆಹಾರವನ್ನು ತಂದು, ಬೆಳಗಿನ ಉಪಹಾರವನ್ನು ಪರಸ್ಪರ ಹಂಚಿಕೊಳ್ಳುವಂತೆ ವಿನಂತಿಸಲಾಯಿತು.

ನವೆಂಬರ್ 1ರಂದು ಎಡಿಸನ್ ರೂಸ್ವೆಲ್ಟ್  ಪಾರ್ಕ್‌ನಲ್ಲಿ ನಡೆದ ಕನ್ನಡ ರಾಜ್ಯೋತ್ಸವ–2025, ಬೃಂದಾವನ ಕನ್ನಡ ಕೂಟದ ಒಗ್ಗಟ್ಟು ಮತ್ತು ಕನ್ನಡ ಪ್ರೇಮಕ್ಕೆ ಮತ್ತೊಮ್ಮೆ ಸಾಕ್ಷಿಯಾಯಿತು. ಅಂದು ನ್ಯೂ ಜರ್ಸಿಯಲ್ಲಿ ಶರತ್ಕಾಲದ ಸಮಯವಾಗಿತ್ತು, ಹವಾಮಾನ ಚಳಿ ತುಂಬಿದ್ದರೂ ಮುಂಜಾನೆಯ ಸಮಯದಲ್ಲಿ ಸದಸ್ಯರು ಎಲ್ಲರೂ ಸ್ಥಳಕ್ಕೆ ಆಗಮಿಸಿದರು. ಅವರು ಬಣ್ಣ ಬಣ್ಣದ ವಸ್ತ್ರಗಳನ್ನು ಧರಿಸಿದ್ದರು. ಹಲವರು ನಮ್ಮ ಕನ್ನಡ ಧ್ವಜದ ಕೆಂಪು ಮತ್ತು ಹಳದಿ ಬಣ್ಣದ ಉಡುಪಿನಲ್ಲಿ ಇದ್ದಿದ್ದು ಮನಮೋಹಕವಾಗಿತ್ತು.

ಕಾರ್ಯಕ್ರಮವು ಬೆಳಿಗ್ಗೆ 9 ಗಂಟೆಗೆ ರಾಷ್ಟ್ರಗೀತೆಗಳೊಂದಿಗೆ ಪ್ರಾರಂಭವಾಯಿತು. ಮೊದಲು ಭಾರತೀಯ ರಾಷ್ಟ್ರೀಯ ಗೀತೆ, ನಂತರ ಅಮೆರಿಕದ ರಾಷ್ಟ್ರೀಯ ಗೀತೆ, ಬಳಿಕ ನಮ್ಮ ಹೃದಯದ ನಾದ—ನಾಡಗೀತೆ ಮೊಳಗಿತು. ಬಳಿಕ ಕರ್ನಾಟಕ ಧ್ವಜಾರೋಹಣ ನಡೆಯಿತು. ಹಾರಾಡುವ ಕೇಸರಿ-ಕೆಂಪು ಬಣ್ಣದ ಧ್ವಜ ಎಲ್ಲರ ಮನಗಳಲ್ಲಿ ಹೆಮ್ಮೆ ತುಂಬಿಸಿತು.  ಸುಮಾರು 60ಕ್ಕೂ ಹೆಚ್ಚು ಸದಸ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಿ ಸಂಭ್ರಮ ಹೆಚ್ಚಿಸಿದರು. ಕನ್ನಡಿಗರು ಪರಂಪರೆಯ ಉಡುಗೆಯಲ್ಲಿ ಹಾಗೂ ಕನ್ನಡ ಧ್ವಜದ ಬಣ್ಣಗಳನ್ನು ಹೊತ್ತ ವಸ್ತ್ರಗಳಲ್ಲಿ ಬಂದಿದ್ದು ಕಣ್ಣು ತುಂಬಾ ಮೆಚ್ಚುವಂತಿತ್ತು. ಕುಟುಂಬಗಳು, ಮಕ್ಕಳು, ಹಿರಿಯರು—ಎಲ್ಲರೂ ಸೇರಿ ಒಂದೇ ಕುಟುಂಬದಂತೆ ಸಂಭ್ರಮಿಸಿದ ವರ್ತನೆ ಕನ್ನಡಿಗರ ಏಕತೆಯನ್ನು ತೋರಿಸಿತು.

ಕಾರ್ಯಕ್ರಮದ ಮಧ್ಯದಲ್ಲಿ ಎಲ್ಲರೂ ಗುಂಪುಚಿತ್ರಗಳನ್ನು ತೆಗೆದುಕೊಳ್ಳುವುದರಲ್ಲಿ ತೀವ್ರ ಉತ್ಸಾಹ ತೋರಿದರು. ನಂತರ ನಮ್ಮ ಅಧ್ಯಕ್ಷರು, ಹಳೆಯ ಅಧ್ಯಕ್ಷರು, ಕೆಲವು ನಿರ್ವಹಣಾಧಿಕಾರಿಗಳು ಹಾಗೂ ಮಂಡಳಿ ಸದಸ್ಯರು ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು. ವಿದೇಶದಲ್ಲಿ ಕನ್ನಡ ಉಳಿಸುವ ನಮ್ಮ ಪ್ರಯತ್ನ, ಪರಂಪರೆ–ಸಂಸ್ಕೃತಿಯನ್ನು ಮುಂದಿನ ಪೀಳಿಗೆಗೆ ತಲುಪಿಸುವ ಬದ್ಧತೆ—ಇವೆಲ್ಲದರ ಬಗ್ಗೆ ಹೃದಯದ ಮಾತುಗಳು ಕೇಳಿಸಿಬಂದವು.

ಸದಸ್ಯರು ಕಾರ್ಯಕ್ರಮಕ್ಕೆ ತಂದ ಆಹಾರದ ವೈವಿಧ್ಯವನ್ನು ವಿವರಿಸಲು ಶಬ್ದಗಳೇ ಸಾಲಲಿಲ್ಲ. ಬಣ್ಣ ಬಣ್ಣದ ಪದಾರ್ಥಗಳಿಂದ ತುಂಬಿದ ಮೇಜು ಎಲ್ಲರ ಗಮನ ಸೆಳೆಯಿತು. ಬೆಳಗಿನ ಪಾಟ್ಲಕ್ ಉಪಹಾರವನ್ನು ಸದಸ್ಯರು ಪರಸ್ಪರ ಹಂಚಿಕೊಂಡು, ಹರ್ಷಭರಿತ ಸಂಭಾಷಣೆಯೊಂದಿಗೆ ಆನಂದಿಸಿದರು. ಕೊನೆಗೆ ಎಲ್ಲರೂ ಸೇರಿ ತಿಂದ ರುಚಿಕರ ಉಪಹಾರ ಕಾರ್ಯಕ್ರಮಕ್ಕೆ ಮಧುರ ಅಂತ್ಯ ಒದಗಿಸಿತು.

ವಿದೇಶದ ನೆಲೆಯಲ್ಲಿಯೇ ಕನ್ನಡ ಪ್ರೀತಿ, ಒಗ್ಗಟ್ಟು ಮತ್ತು ಸಂಸ್ಕೃತಿಯ ಕೈಚಳಕವನ್ನು ಬಿಂಬಿಸಿದ ಈ ರಾಜ್ಯೋತ್ಸವ ಸಂಭ್ರಮ, ಬೃಂದಾವನ ಕನ್ನಡ ಕೂಟದ ಮತ್ತೊಂದು ಸ್ಮರಣೀಯ ಪುಟವಾಗಿ ಉಳಿಯುತ್ತದೆ.

— ಬೃಂದಾವನ ಕನ್ನಡ ಕೂಟ – ಸಂಕಲ್ಪ ತಂಡ

# ರಾಜ್ಯೋತ್ಸವ













**ಪೂರ್ಣಿಮ ಭಟ್**
ನ್ಯೂ ಜೆರ್ಸಿ

# ಮಕ್ಕಳೋತ್ಸವ 2025 – ಒಂದು ಮರೆಯಲಾಗದ ಸಂಭ್ರಮದ ಕಥೆ

**ಬ**ಣ್ಣಬಣ್ಣದ ಅಲಂಕಾರ ದಿಂದ ಕೂಡಿದ ಸಭಾಂಗಣದ. ಮಕ್ಕಳ ನಗುವಿನ  ಕಲರವ. ವೇದಿಕೆಯ ಮೇಲೆ ಪುಟ್ಟ- ಪುಟ್ಟ ಹೆಜ್ಜೆ-ಗೆಜ್ಜೆ ಯ ನಾದ ಈ ಎಲ್ಲವೂ ತಿಳಿಸುತ್ತಿತ್ತು ಇದು ಮಕ್ಕಳೋತ್ಸವದ ಶುಭ ದಿನವೆಂದು
ಈ ಕಾರ್ಯಕ್ರಮವು ಗಣೇಶ ಪೂಜೆಯಿಂದ ಆರಂಭವಾಯಿತು. ಆಚಾರ್ಯರ ಮಂತ್ರೋಚ್ಚಾರಣೆಯ  ಮೂಲಕ ನಡೆದ ಪೂಜೆ ಎಲ್ಲರ ಮನ - ಮನಸ್ಸುಗಳನ್ನು ಧ್ಯಾನಪರವಶಗೊಳಿಸಿತು.
ನಂತರ ವೇದಿಕೆಗೆ ಬಂದ ಕಾರ್ಯಕ್ರಮದ ನಿರೂಪಕರಾದ ಶ್ರೀವಿದ್ಯಾ ಪ್ರಶಾಂತ್ ಮತ್ತು ಅಭಿನವ ರಮೇಶ್ ರವರು  ಸಭಿಕರಿಗೆ ಹಾರ್ದಿಕ ಸ್ವಾಗತ ಕೋರಿದರು. ಹಾಗೆ ಅತ್ಯುತ್ತಮವಾಗಿ ಸಂಪೂರ್ಣ ಕಾರ್ಯಕ್ರಮದ ನಿರೂಪಣೆಯನ್ನು ಮಾಡಿ ತಮ್ಮ ಅದ್ಭುತವಾದ ವಾಕ್ಚಾತುರ್ಯದ ಮೂಲಕ ಪ್ರೇಕ್ಷಕರ ಮನ ಗೆದ್ದರು
ಸಭಾಂಗಣದಲ್ಲಿ ಎಲ್ಲರೂ ಎದ್ದು ನಿಂತು ಕನ್ನಡ ಸಂಕೇತ ಗೀತೆ ಮತ್ತು ಎರಡು ದೇಶಗಳ ರಾಷ್ಟ್ರಗೀತೆಗಳನ್ನು ಹಾಡಿ ದೇಶಭಕ್ತಿಯ ಭಾವವನ್ನು ವ್ಯಕ್ತಪಡಿಸಿದರು ತ್ರಿಷಾ ಮತ್ತು ಜಿಯಾ ಅವರು ಗಣೇಶ ಸ್ತುತಿಯನ್ನು ಶಾಸ್ತ್ರೀಯ ಸಂಗೀತದ  ಮೂಲಕ ಹಾಡಿ ಎಲ್ಲರನ್ನೂ ಸಂಗೀತ ಲೋಕಕ್ಕೆ ಕರೆದೊಯ್ದರು. ಬೃಂದಾವನ ಕನ್ನಡ ಕೂಟದ ಸಂಕಲ್ಪ ತಂಡದ ಅಧ್ಯಕ್ಷರಾದ ಸುನಿಲ್ ಹುಲಿಕೆರೆಯವರು ದೀಪ ಬೆಳಗಿಸಿ ಕಾರ್ಯಕ್ರಮಕ್ಕೆ ವಿದ್ಯುಕ್ತ ಚಾಲನೆ ನೀಡಿದರು.
ಅಧ್ಯಕ್ಷರು ತಮ್ಮ ಮಾತುಗಳಲ್ಲಿ “ಮಕ್ಕಳಲ್ಲಿ ಸಂಸ್ಕೃತಿ ಮತ್ತು ಭಾಷೆಯ ಬೇರುಗಳನ್ನು ಗಟ್ಟಿಗೊಳಿಸುವುದೇ ಇಂತಹ ಕಾರ್ಯಕ್ರಮಗಳ ಉದ್ದೇಶ” ಎಂದು ಹೇಳಿದರು ಗುರುವಂದನಾ ಕಾರ್ಯಕ್ರಮದ ಕ್ಷಣಗಳು ಎಲ್ಲರ ಮನಸ್ಸಿನಲ್ಲಿ ಅವಿಸ್ಮರಣೀಯವಾಗಿ ಉಳಿಯವು. ಮಕ್ಕಳು ಶಿಕ್ಷಕರನ್ನು ಒಬ್ಬೊಬ್ಬರನ್ನಾಗಿ ವೇದಿಕೆಗೆ ಆಹ್ವಾನಿಸಿ, ಗೌರವ, ಕೃತಜ್ಞತೆ ಮತ್ತು ಪ್ರೀತಿಯ ಭಾವದಿಂದ ಫಲಪುಷ್ಪಗಳನ್ನು ಅರ್ಪಿಸಿ ಭಕ್ತಿ ಪೂರ್ವಕ ನಮನ ಸಲ್ಲಿಸಿದರು. ಶಿಕ್ಷಕರಿಗೆ ಸನ್ಮಾನ ನೀಡಿದ ಕ್ಷಣ ಎಲ್ಲರ ಹೃದಯಕ್ಕೆ ಸ್ಪರ್ಶಿಸಿತು.
ನಂತರ ಮುಂಬರುವ ಅಮೆರಿಕ ದಲ್ಲಿ “ಅಕ್ಕ “ ಕಾರ್ಯಕ್ರಮದ ಬಗ್ಗೆ ಕಿರಣ್ ಅಗ್ರಹಾರ ಅವರ ಯುವ ಅಕ್ಕ ತಂಡ ದಿಂದ ನೀಡಿದ ಮಾಹಿತಿ ಅತ್ಯಂತ ಉಪಯುಕ್ತವಾಗಿತ್ತು.  ಮಧು ರಂಗಯ್ಯ ಅವರ ಪ್ರೇರಣಾದಾಯಕವಾಗಿತ್ತು.
ಸ್ವಲ್ಪ ವಿರಾಮ—ಕಾಫಿ ಬ್ರೇಕ್. ನಗು, ಮಾತು, ಚರ್ಚೆಗಳ ನಡುವೆ ರಾಫಲ್ ಡ್ರಾ ನಡೆದಿತು. ಉಪಾಧ್ಯಕ್ಷರು ಪ್ರಾಯೋಜಕರನ್ನು ಘೋಷಿಸಿದರು ಮಕ್ಕಳೋತ್ಸವದ ಮುಖ್ಯ ಅತಿಥಿ ಗಾಯತ್ರಿನಾಗ್ ಅವರು ಸಭೆಯಲ್ಲಿ ಮಕ್ಕಳಿಗೆ ನೀಡಿದ ಮಾರ್ಗದರ್ಶನದ ಮಾತುಗಳು ಮಕ್ಕಳಲ್ಲಿ ಕನ್ನಡದ ಪ್ರತಿ ಪ್ರೀತಿ ಮತ್ತು ಉತ್ಸಾಹವನ್ನು ಹುಟ್ಟುಹಾಕಿದವು.
ಅನಂತರ ಆರಂಭವಾಯಿತು ಮಕ್ಕಳ ಸಂಭ್ರಮದ ಪ್ರದರ್ಶನ ಈಸ್ಟ್ ವಿಂಡ್ಸರ್ ಶಾಲೆಯ ಮಕ್ಕಳು  ಕನ್ನಡದ ಪ್ರಸಿದ್ಧ ಲೇಖಕಿ ವೈದೇಹಿ ಅವರ ಢಾಣ ಡಂಗುರ ನಾಟಕದ ಮನೋಜ್ಞ, ಮನರಂಜನೀಯ ಪ್ರದರ್ಶನ –  ನಮ್ಮ ರಾಜಕುಮಾರ ಕಾಣೆಯಾಗಲಿದ್ದಾನೆ ನಾಟಕ  ಪ್ರೇಕ್ಷಕರಲ್ಲಿ ಅತ್ಯಂತ ಕುತೂಹಲ ಮೂಡಿಸಿತ್ತು ಹಾಗು ನೃತ್ಯ ಪ್ರದರ್ಶನ ವೇದಿಕೆಗೆ  ಮೆರುಗು ನೀಡಿತು. ಸಣ್ಣ ಸಣ್ಣ ಹೆಜ್ಜೆಗಳಲ್ಲಿ ಇದ್ದ ದೊಡ್ಡ ಆತ್ಮವಿಶ್ವಾಸ ಎಲ್ಲರ ಮನಸ್ಸು ಗೆದ್ದಿತು.
ಮುಂದೆ ಕೋಗಿಲೆ ವರ್ಗ 1 ಮತ್ತು 2 ಮಕ್ಕಳ ಗಾಯನ. ಅವರ ಮುದ್ದಾದ ಸ್ವರಗಳು ಸಭಾಂಗಣವನ್ನು ಮಧುರತೆಯಿಂದ ತುಂಬಿದವು. ಬಹುಮಾನ ಸ್ವೀಕರಿಸಿದಾಗ ಅವರ ಮುಖದಲ್ಲಿ ಕಂಡ ಸಂತಸ ಆ ದಿನದ ಅತ್ಯಂತ ಅಮೂಲ್ಯ ಕ್ಷಣಗಳಲ್ಲಿ ಒಂದಾಗಿತ್ತು.
ಮಾರ್ಲ್ಬೋರೊ ಶಾಲೆಯ ಮಕ್ಕಳಿಂದ ಅದ್ಭುತ ಪ್ರದರ್ಶನ — “ದಸರಾ ಹಬ್ಬ“ನಾಟಕ ದಲ್ಲಿ  ನವರಾತ್ರಿ ದೇವಿ ಮಹಿಮೆ , ಗೊಂಬೆಯಿಡುವು ದು ನಾಡ ಹಬ್ಬ ಮೈಸೂರಿನ ವೈಭವ ನಾಟಕದ ಮೂಲಕ ತೋರಿಸಿದ್ದು ಭಕ್ತಿ ಪೂರ್ವಕ ವಾಗಿತ್ತು ಮತ್ತುಈ ಪ್ರದರ್ಶನ ವೇದಿಕೆಯನ್ನು ಮತ್ತೊಮ್ಮೆ ಉಜ್ವಲಗೊಳಿಸಿತು.
ನಂತರ ಕೋಗಿಲೆ ವರ್ಗ 3 ಮತ್ತು 4 ಮಕ್ಕಳ ಗಾಯನ ಪ್ರದರ್ಶನ—ಪಕ್ವತೆ, ಅಭ್ಯಾಸ ಮತ್ತು ಆತ್ಮವಿಶ್ವಾಸ ಎಲ್ಲವೂ ಒಂದಾಗಿ ಮಿಂಚಿತು.

# ಮಕ್ಕಳೋತ್ಸವ







ಎಡಿಸನ್ ಶಾಲೆಯ ಮಕ್ಕಳು “ಶಿವಭೂತಿ” ನೀತಿ ಕಥೆಯನ್ನು ನಾಟಕದ ಮೂಲಕ ಅತ್ಯದ್ಭುತವಾಗಿ ಪ್ರದರ್ಶಿಸಿದರು ಮಕ್ಕಳಲ್ಲಿರುವ ವೈವಿಧ್ಯಮಯ ಪ್ರತಿಭೆಯನ್ನು ತೆರೆದಿಟ್ಟಿತು

ಫೈರ್‌ಲೆಸ್ ಕುಕಿಂಗ್, ಕವನ ವಾಚನ ಮತ್ತು ಫ್ಯಾನ್ಸಿ ಡ್ರೆಸ್ ಸ್ಪರ್ಧೆಗಳು ಮಕ್ಕಳ ಕಲ್ಪನಾಶಕ್ತಿಗೆ ಹೊಸ ಆಯಾಮ ನೀಡಿದವು. ಬಹುಮಾನ ವಿತರಣೆ ಸಮಯದಲ್ಲಿ ಕೇಳಿಬಂದ ಕರತಾಡವ ಸಭಾಂಗಣವನ್ನು ಕಂಪಿಸಿತು.

ಸೌತ್ ಬ್ರನ್ಸ್‌ವಿಕ್ ಶಾಲೆಯ ಮಕ್ಕಳು ಎಲ್ಲ ಗ್ರಹಗಳ ವೈಶಿಷ್ಟ್ಯಗಳನ್ನು ತಿಳಿಸಿದಲ್ಲದೆ ನಮ್ಮ ಪ್ರಕೃತಿಯನ್ನು ಕಾಪಾಡಿ ಹಸಿರನ್ನು ಉಳಿಸೋಣ ಹಸಿರೆ ಉಸಿರು ಎನ್ನುವ ಉತ್ತಮವಾದ ಸಂದೇಶದೊಂದಿಗೆ ಸುಂದರವಾದ ಕಿರುರೂಪಕವನ್ನು ಪ್ರದರ್ಶನವನ್ನು ಮಾಡಿದರು ಹೀಗೆ ಕಾರ್ಯಕ್ರಮದ ಉದ್ದಕ್ಕೂ ಮಕ್ಕಳ ಪ್ರತಿಭೆ ಅರಳಿತು ಹೇಗೆಯೇ ಪ್ರೇಕ್ಷಕರಲ್ಲಿ ಮತ್ತಷ್ಟು ಚೈತನ್ಯ ತಂದಿತು.

ಕಾರ್ಯಕ್ರಮದ ಕೊನೆಯಲ್ಲಿ ನಡೆದ ಗೀತಾ ಅವರ ನೃತ್ಯ ತಂಡದ ನಾಲ್ಕು ನಿಮಿಷಗಳ ಬೃಂದಾವನ ಬೆಡಗಿಯರ ನೃತ್ಯ ಮಸ್ತ್ ಮಸ್ತಾಗಿತ್ತು ಸಿಳ್ಳೆ ಚಪ್ಪಾಳೆ ಯೊಂದಿಗೆ ಎಲ್ಲರ ಮನಸ್ಸನ್ನು ಕದ್ದಿತು.

ಬೃಂದಾವನ ಯುವ ತಂಡ ಮುಂದಿನಕಾರ್ಯವೈಕರಿಯನ್ನು ತಿಳಿಸಿದರು ಹಾಗು ಸಂಕಲ್ಪ ತಂಡದ ಎಲ್ಲಾ ಸದಸ್ಯರು ಸಭೆಯಲ್ಲಿ ಬಂದು ಮಾಡಿದ ನೃತ್ಯ ಎಲ್ಲರ ಮನಸೂರೆಗೊಂಡಿತ್ತು ಹಾಗು ಯುವ ಎಲ್ಲಾ ಕಾರ್ಯಕ್ರಮಗಳಲ್ಲೂ ತಂಡದಯಲ್ಲ ಸದಸ್ಯರ ಪರಿಶ್ರಮದ ಕಾರ್ಯವೈಕರಿ ಪ್ರೇಕ್ಷಕರ ಮನಮುಟ್ಟಿತ್ತು.

ಸೂರ್ಯಾಸ್ತದ ಹೊತ್ತಿಗೆ, ಕಾರ್ಯಕ್ರಮವು ತನ್ನ ಅಂತ್ಯಕ್ಕೆ ಸಮೀಪಿಸಿತು. MC ಮತ್ತು ಕಾರ್ಯದರ್ಶಿಯವರ ಧನ್ಯವಾದ ಭಾಷಣದೊಂದಿಗೆ ಎಲ್ಲರಿಗೂ ಕೃತಜ್ಞತೆ ಸಲ್ಲಿಸಲಾಯಿತು. ಸಭಾಂಗಣದಿಂದ ಹೊರಡುವಾಗ ಎಲ್ಲರೂ ಈ ತರಹದ ಕಾರ್ಯಕ್ರಮ ಇನ್ನೂ ಬರಬೇಕು ಎನ್ನುವ ಆಶಯ ಹೊಂದಿದ್ದರು .

ಆದರೆ ಸಂಭ್ರಮ ಅಷ್ಟಕ್ಕೆ ಮುಗಿದಿರಲಿಲ್ಲ.

ಕಾರ್ಯಕ್ರಮದ ಸಮಾರೋಪವಾಗಿ ಎಲ್ಲರಿಗೂ ಭರ್ಜರಿ ಭೋಜನವನ್ನು ಏರ್ಪಡಿಸಲಾಗಿತ್ತು. ಊಟದ ಪ್ರದೇಶಕ್ಕೆ ಕಾಲಿಟ್ಟ ಕ್ಷಣವೇ ರುಚಿಕರ ತಿನಿಸುಗಳು ಎಲ್ಲ ಬಾಯಲ್ಲಿ ನೀರು ತರಿಸಿತ್ತು ವಿಧ - ವಿಧದ ಆಹಾರಗಳಿಂದ ತುಂಬಿದ ಭೋಜನ, ಎಲ್ಲರನ್ನೂ ಸಂತೃಪ್ತಿಯಾಗಿಸಿತ್ತು ಮಕ್ಕಳಿಗೆ ವಿಶೇಷ ಆಕರ್ಷಣೆಯಾಗಿದ್ದವು ರುಚಿಕರವಾದ ಡೋನಟ್ಸ್—ಬಣ್ಣಬಣ್ಣದ ಅಲಂಕಾರಗಳೊಂದಿಗೆ ನಗುವಂತಿದ್ದ ಡೋನಟ್ಸ್‌ಗಳು ಮಕ್ಕಳ ಕೈಯಲ್ಲಿ ಖುಷಿಯ ಸಿಹಿಯಾಗಿ ಕರಗಿದವು. ಭೋಜನದ ನಂತರ ಬಂದ ಐಸ್‌ಕ್ರೀಮ್ ಮಕ್ಕಳ ಸಂತೋಷವನ್ನು ಇನ್ನಷ್ಟು ಹೆಚ್ಚಿಸಿತು. ಜೊತೆಗೆ ಸಿಹಿಯಾದ ಕ್ಯಾರೆಟ್ ಹಲ್ವಾ ಊಟಕ್ಕೆ ಪರಿಪೂರ್ಣ ಅಂತ್ಯವನ್ನು ನೀಡಿತು. ನಗು, ಮಾತು, ಸಿಹಿ ರುಚಿ ಮತ್ತು ದಿನವಿಡೀ ಸಂಗ್ರಹಿಸಿದ ನೆನಪುಗಳೊಂದಿಗೆ ಮಕ್ಕಳು ಮತ್ತು ಪಾಲಕರು ಮನೆ ಕಡೆ ಹೆಜ್ಜೆ ಹಾಕಿದರು.

ಆ ದಿನದ ಮಕ್ಕಳೋತ್ಸವ ಕೇವಲ ಒಂದು ಕಾರ್ಯಕ್ರಮವಾಗಿರಲಿಲ್ಲ. ಅದು ಮಕ್ಕಳ ಕನಸುಗಳಿಗೆ ರೆಕ್ಕೆ ನೀಡಿದ, ಗುರು–ಶಿಷ್ಯರ ಬಾಂಧವ್ಯವನ್ನು ಮರುಸ್ಮರಿಸಿದ, ಸಂಸ್ಕೃತಿ ಮತ್ತು ಸಮುದಾಯವನ್ನು ಒಂದಾಗಿ ಕಟ್ಟಿ ಹಾಕಿದ—ಮತ್ತು ಸಿಹಿಯಾದ ಡೋನಟ್ಸ್, ರುಚಿಕರ ಭೋಜನ, ಐಸ್‌ಕ್ರೀಮ್ ಹಾಗೂ ಕ್ಯಾರೆಟ್ ಹಲ್ವಾದೊಂದಿಗೆ ಸಂಪೂರ್ಣವಾದ ಒಂದು ಜೀವಂತ ಕಥೆಯಾಗಿ ಎಲ್ಲರ ಮನಸ್ಸಿನಲ್ಲಿ ಸದಾಕಾಲ ಉಳಿದುಬಿಟ್ಟಿತು.

# ಮಕ್ಕಳೋತ್ಸವ


ಕರ್ನಾಟಕ ಸಾಂಸ್ಕೃತಿಕ ಸಂಸ್ಥೆ – ಬೃಂದಾವನ
ನ್ಯೂ ಜೆರ್ಸಿ, ಯುಎಸ್ಎ
"ಸುಮಧುರ ಸ್ನೇಹ ಸಮ್ಮಿಲನ ನಮ್ಮ ಬೃಂದಾವನ"
KARNATAKA CULTURAL ORGANIZATION
(KCOB) BRINDAVANA
NEW JERSEY, USA
www.brindavana.org


Little Millet
Kodo Millet











**ವಿದ್ಯಾಪ್ರಸನ್ನ ಮಾಗಡಿ**
ನ್ಯೂ ಜೆರ್ಸಿ

# ಭಕ್ತಿ–ಸಂಪ್ರದಾಯಗಳ ಸಂಗಮ: ಶ್ರೀ ಶ್ರೀನಿವಾಸ ಕಲ್ಯಾಣೋತ್ಸವ

**ಎ**ಡಿಸನ್, ನ್ಯೂ ಜರ್ಸಿಯಲ್ಲಿರುವ ಶ್ರೀ ಕೃಷ್ಣ ವೃಂದಾವನದಲ್ಲಿ ದಿನಾಂಕ ಡಿಸೆಂಬರ್ 13, 2025 (ಶನಿವಾರ), ಮಾರ್ಗಶಿರ ಮಾಸ – ಬಹುಳ ದಶಮಿ ಎಂಬ ಪುಣ್ಯತಿಥಿಯಲ್ಲಿ ಭವ್ಯವಾಗಿ ಆಯೋಜಿಸಲಾದ ಶ್ರೀ ಶ್ರೀನಿವಾಸ ಕಲ್ಯಾಣೋತ್ಸವವು ಭಕ್ತಿಭಾವ, ಸಂಪ್ರದಾಯ ಮತ್ತು ದೈವಸಾನ್ನಿಧ್ಯದ ವೈಭವದಿಂದ ಕಂಗೊಳಿಸಿತು.

ದೈನಂದಿನ ನಿತ್ಯ ಪ್ರಾತಃಕಾಲೀನ ಪೂಜೆಯ ನಂತರ ಶ್ರೀನಿವಾಸ ಕಲ್ಯಾಣೋತ್ಸವವು ಶುಭಾರಂಭವಾಯಿತು. ಕಲ್ಯಾಣೋತ್ಸವದ ಅಂಗವಾಗಿ ಮೊದಲು ಶ್ರೀನಿವಾಸ ದೇವರಿಗೆ ಮಂಗಳ ಸ್ನಾನ, ಅನಂತರ ವೈಭವೋಪೇತ ಅಲಂಕಾರ ಮತ್ತು ಮಂಗಳಾರತಿ ನೆರವೇರಿಸಲಾಯಿತು. ಶ್ರೀದೇವಿ ಹಾಗೂ ಭೂದೇವಿಯರ ಆಗಮನಕ್ಕೆ ಭಕ್ತಿಪೂರ್ವಕ ಸ್ವಾಗತ ಸಲ್ಲಿಸಿ, ಅವರಿಗೂ ಮಂಗಳ ಸ್ನಾನ ಹಾಗೂ ಅಲಂಕಾರ ನೆರವೇರಿಸಲಾಯಿತು.

ಕಲ್ಯಾಣೋತ್ಸವದ ಸಂಪ್ರದಾಯಾನುಸಾರವಾಗಿ, ಮಂಗಳ್ಯ ಧಾರಣೆಗೆ ಪೂರ್ವಭಾವಿಯಾಗಿ ಅಗತ್ಯವಿರುವ ಎಲ್ಲ ವೇದೋಕ್ತ ವಿಧಿ–ವಿಧಾನಗಳನ್ನು ಕ್ರಮಬದ್ಧವಾಗಿ ನೆರವೇರಿಸಲಾಯಿತು. ಈ ವಿಧಿ–ವಿಧಾನಗಳ ಮೂಲಕ ಕಲ್ಯಾಣೋತ್ಸವವು ಪವಿತ್ರತೆ, ಶ್ರದ್ಧೆ ಮತ್ತು ಸಂಪ್ರದಾಯದ ಸಂಪೂರ್ಣತೆಯನ್ನು ಪಡೆದಿತು.

ಮುಂದೆ "ಮಾಂಗಲ್ಯಂ ತಂತುನಾನೇನ ಜಗಜ್ಜೀವನ ಹೇತುನಾ" ಎಂಬ ಪವಿತ್ರ ಮಂತ್ರೋದ್ಘೋಷದೊಂದಿಗೆ ಮಂಗಳ್ಯ ಸೂತ್ರ ಧಾರಣೆ ವಿಧಿ ಭಕ್ತಿಭಾವದಿಂದ ಜರುಗಿತು. ಇದಕ್ಕೆ ಅನುಸಾರವಾಗಿ, ವೇದೋಕ್ತ ವಿಧಾನದಲ್ಲಿ ಅತ್ಯಂತ ಪವಿತ್ರವಾದ ಕನ್ಯಾದಾನ ಸೇವೆ ನೆರವೇರಿಸಲಾಯಿತು. ಈ ಸೇವೆಯ ಮೂಲಕ ಶ್ರೀದೇವಿ ಹಾಗೂ ಭೂದೇವಿಯರನ್ನು ಶ್ರೀಭೂಸಮೇತ ಶ್ರೀನಿವಾಸ ದೇವರಿಗೆ ಅರ್ಪಿಸುವ ಮಹತ್ವದ ವಿಧಿ ಭಕ್ತರ ಹೃದಯಗಳನ್ನು ಭಕ್ತಿಭಾವದಿಂದ ತುಂಬಿಸಿತು. ಈ ಸಂದರ್ಭದಲ್ಲಿ ಭಕ್ತರು ಲೋಕಕಲ್ಯಾಣ ಹಾಗೂ ಕುಟುಂಬಗಳ ಸುಖ–ಶಾಂತಿಯಿಗಾಗಿ ವಿಶೇಷ ಪ್ರಾರ್ಥನೆ ಸಲ್ಲಿಸಿದರು.

ಪೂಜೆಯನ್ನು ಯೋಗೇಂದ್ರ ಭಟ್ ಅವರು ನಿಷ್ಠೆಯಿಂದ ನೆರವೇರಿಸಿದರು. ಕಲ್ಯಾಣೋತ್ಸವದ ಪ್ರತಿಯೊಂದು ಹಂತದ ತಾತ್ಪರ್ಯವನ್ನು ಸುಂದರವಾಗಿ ವಿವರಿಸುತ್ತಾ, ನಡೆಯುವ ವಿಧಿಗಳ ಹಿಂದಿರುವ ಆಧ್ಯಾತ್ಮಿಕ ಅರ್ಥವನ್ನು ಭಕ್ತರಿಗೆ ಸ್ಪಷ್ಟಪಡಿಸಿದುದು ವಿಶೇಷವಾಗಿ ಎಲ್ಲರ ಮನ ಸೆಳೆಯಿತು.

ನೃತ್ಯ ಸೇವೆಯ ಅಂಗವಾಗಿ ಮಹಿಳಾ ಭಕ್ತರು ಶ್ರೀ ಪುರಂದರ ದಾಸರ "ಏನು ಹೇಳಲಿ ತಂಗಿ, ತಿಮ್ಮಯ್ಯನ ಪಾದವನು ಕಂಡೆ" ಎಂಬ ಕೀರ್ತನೆಗೆ ಮನಮುಟ್ಟುವ ಜನಪದ ನೃತ್ಯವನ್ನು ಅರ್ಪಿಸಿದರು. ಈ ನೃತ್ಯ ಸೇವೆಯಿಂದ ಸಭಾಂಗಣವು ಭಕ್ತಿ–ರಸದೊಂದಿಗೆ ಮಿಂದೆತ್ತಿತು.

ಅನಂತರ ಭಗವದ್ಗೀತಾ ಸೇವೆಯ ಭಾಗವಾಗಿ ಭಕ್ತರಿಂದ ದ್ವಾದಶ ಅಧ್ಯಾಯದ ಪಠಣ ನಡೆಯಿತು. ಗೀತೋಪದೇಶದ ಈ ಪಠಣವು ಕಲ್ಯಾಣೋತ್ಸವಕ್ಕೆ ಆಧ್ಯಾತ್ಮಿಕ ಆಳವನ್ನೂ ಶಾಂತಿಯನ್ನೂ ತುಂಬಿತು.

ಸೇವಾಭಾವದ ಗುರುತಾಗಿ, ಮಠದ ಪರವಾಗಿ ಹಾಗೂ ಸ್ವಯಂಸೇವಕರಿಂದ ಯೋಗೇಂದ್ರ ಭಟ್, ರಘವೇಂದ್ರ ಭಟ್ ಮತ್ತು ರಾಜೇಂದ್ರ ಭಟ್ ಅವರನ್ನು ಅವರ ಅದ್ವಿತೀಯ ಸಮರ್ಪಣೆ ಹಾಗೂ ನಿರಂತರ ಸೇವೆಗಾಗಿ ಸನ್ಮಾನಿಸಲಾಯಿತು.

ಎಲ್ಲ ಸೇವೆಗಳ ಅಂತ್ಯದಲ್ಲಿ ದೇವರನ್ನು ಮುಖ್ಯ ಮಂದಿರಕ್ಕೆ ಕರೆತಂದು ಮಹಾ ಮಂಗಳಾರತಿ ನೆರವೇರಿಸಲಾಯಿತು. ಅನಂತರ ಭಕ್ತರಿಗೆ ಸವಿಯಾದ, ಸಿಹಿಭಕ್ಷ್ಯಗಳಿಂದ ಕೂಡಿದ ರುಚಿಕರ ಪ್ರಸಾದ ಭೋಜನವನ್ನು ವಿತರಿಸಲಾಯಿತು. ಈ ಭವ್ಯ ಕಲ್ಯಾಣೋತ್ಸವಕ್ಕೆ 700ಕ್ಕೂ ಹೆಚ್ಚು ಭಕ್ತರು ಸಾಕ್ಷಿಯಾದರು ಎಂಬುದು ವಿಶೇಷ.


ಶ್ರೀದೇವಿ–ಭೂದೇವಿ ಸಮೇತ ಶ್ರೀನಿವಾಸ ದೇವರು, ಈ ಮಹಾ ಕಲ್ಯಾಣೋತ್ಸವವನ್ನು ದರ್ಶನ ಮಾಡಿ ಸೇವೆಯಲ್ಲಿ ಪಾಲ್ಗೊಂಡ ಎಲ್ಲ ಭಕ್ತರ ಮೇಲೂ ಅಪಾರ ಕೃಪೆಯನ್ನು ಸದಾ ಸುರಿಸಲಿ ಎಂಬುದು ನಮ್ಮೆಲ್ಲರ ಹೃದಯಪೂರ್ವಕ ಹಾರೈಕೆ.

# ಕಲ್ಯಾಣೋತ್ಸವ













**ಅಭಿನವ್ ರಮೇಶ್**
ನ್ಯೂ ಜೆರ್ಸಿ

# ಫಿಲ್ಮಾಂಟ್ ಪಯಣ: ಮರೆಯಲಾಗದ ಹೈಕಿಂಗ್ ಅನುಭವ




**ನಾ**ನು ಅಭಿನವ ರಮೇಶ, ನ್ಯೂ ಮೆಕ್ಸಿಕೋದಲ್ಲಿ 9 ದಿನಗಳ ಕಾಲ ಫಿಲ್ಮಾಂಟ್ ಹೈಕಿಂಗ್‌ನಲ್ಲಿ ಭಾಗವಹಿಸಿದ್ದೆ. ಆ ನನ್ನ ಅನುಭವವನ್ನು ನಿಮ್ಮೊಂದಿಗೆ ಹಂಚಿಕೊಳ್ಳಲು ಸಂತೋಷವಾಗುತ್ತಿದೆ.

ನಾನು ಮಾಂಟ್ಗೊಮರಿ ಸ್ಕೌಟ್ ಟ್ರೂಪ್ ೮೫೦ ಸ್ಕೌಟ್. ೨೦೨೩ ರ ಡಿಸೆಂಬರ್‌ನಲ್ಲಿ ನಮ್ಮ ಸ್ಕೌಟ್ ತಂಡಕ್ಕೆ ಜೂಲೈ ೨೦೨೫ ರ ಫಿಲ್ಮಾಂಟ್ ೭ ದಿನಗಳ ಹೈಕಿಂಗ್‌ಗೆ ಅನುಮತಿ ದೊರೆಯಿತು. ಸಾಮಾನ್ಯವಾಗಿ ಸ್ಕೌಟ್ ತಂಡಕ್ಕೆ ಹೈಕಿಂಗ್‌ಗೆ ಹೋಗಲು ಕನಿಷ್ಠ ೧೨ ರಿಂದ ೧೮ ತಿಂಗಳ ಮುಂಚಿತವಾಗಿ ಅನುಮತಿ ಪಡೆಯಬೇಕಾಗುತ್ತದೆ.

ನಾನು 8ನೇ ತರಗತಿಯ ವಿದ್ಯಾರ್ಥಿಯಾಗಿದ್ದರಿಂದ, ಇಂತಹ ಅಪಾಯಕಾರಿ ಹೈಕಿಂಗ್‌ಗೆ ಹೋಗುವ ನಿರ್ಧಾರ ಸುಲಭವಾಗಿರಲಿಲ್ಲ. ಸ್ಕೌಟ್ ಸಂಸ್ಥೆ ಲಾಭರಹಿತವಾಗಿರುವುದರಿಂದ ಎಲ್ಲಾ ವೆಚ್ಚವನ್ನು ಪೋಷಕರೇ ಭರಿಸಬೇಕಾಗುತ್ತದೆ. ಒಟ್ಟು ವೆಚ್ಚವು ಪ್ರಯಾಣ ಸೇರಿ ಸುಮಾರು $೨,೨೦೦ – $೨ ,೫೦೦ ಆಗಿತ್ತು. ನಾನು ನನ್ನ ಪೋಷಕರಿಗೆ ನನ್ನ ಉದ್ದೇಶವನ್ನು ತಿಳಿಸಿದಾಗ, ಅವರು ನನ್ನ ಆತ್ಮವಿಶ್ವಾಸ ಮತ್ತು ಕಾರಣಗಳನ್ನು ಕೇಳಿದರು. ಕೊನೆಗೆ ಅವರನ್ನು ಮನವರಿಕೆ ಮಾಡಿಸಿ ಅನುಮತಿ ಪಡೆದೆ.

ಅಲ್ಲಿಂದಲೇ ನನ್ನ ಮಹಾ ಹೈಕಿಂಗ್ ಪ್ರಯಾಣವು ಆರಂಭವಾಯಿತು – ನಿಜವಾದ ಹೈಕಿಂಗ್‌ಗೆ ಸುಮಾರು ೧೮ ತಿಂಗಳು ಮುಂಚಿತವಾಗಿ.

ಈ ಕಾರ್ಯಕ್ರಮದಲ್ಲಿ ೮ ಸ್ಕೌಟ್‌ಗಳು ಮತ್ತು ೪ ಸ್ಕೌಟ್ ಮಾಸ್ಟರ್‌ಗಳು ಸೇರಿ ಒಟ್ಟು ೧೨ ಜನರು ನೋಂದಾಯಿಸಿಕೊಂಡರು. ನಾವು ಪ್ರತೀ ವಾರ ಸಭೆ ನಡೆಸಿ ಯೋಜನೆ ರೂಪಿಸುತ್ತಿದ್ದೆವು. ಮೂಲ ಯೋಜನೆ ಸಿದ್ಧವಾದ ನಂತರ, ಸ್ಕೌಟ್ ಮಾಸ್ಟರ್‌ಗಳು ಎಲ್ಲಾ ಪೋಷಕರಿಗೆ ಕಾರ್ಯಕ್ರಮದ ವಿವರಗಳನ್ನು ತಿಳಿಸಿದರು. ಅದರಿಂದ ನನ್ನ ಪೋಷಕರಿಗೂ ಸ್ವಲ್ಪ ಆತ್ಮವಿಶ್ವಾಸ ಬಂತು.

ಈ ಹೈಕಿಂಗ್‌ನಲ್ಲಿ ಪ್ರತಿಯೊಬ್ಬರೂ ಗರಿಷ್ಠ ೩೦-೩೫ ಪೌಂಡ್ ತೂಕದ ಸಾಮಾನುಗಳನ್ನು ಮಾತ್ರ ಹೊತ್ತುಕೊಳ್ಳಬೇಕಾಗಿತ್ತು, ಏಕೆಂದರೆ, ನಾವು ಹೈಕಿಂಗ್ ಮಾಡುವಾಗ ನಮ್ಮ ಎಲ್ಲಾ ಸಾಮಾನುಗಳನ್ನು ನಾವೇ ನಮ್ಮ ಜೊತೆ ಎತ್ತಿಕೊಂಡು ಹೋಗಬೇಕಾಗಿತ್ತು. ಯಾವ ಸಾಮಾನು ಅಗತ್ಯ, ಯಾವುದು ಅಗತ್ಯವಲ್ಲ ಎಂಬುದನ್ನು ತೂಕದ ಆಧಾರದ ಮೇಲೆ ನಿರ್ಧರಿಸಬೇಕಾಗಿತ್ತು. ನಮ್ಮ ವಿವರವಾದ ಯೋಜನೆಯಿಂದಲೇ ಸರಿಯಾದ ಸಾಮಾನುಗಳನ್ನು ಆಯ್ಕೆ ಮಾಡಿಕೊಳ್ಳಲು ಸಾಧ್ಯವಾಯಿತು.

ಹೈಕಿಂಗ್‌ಗೆ ೬-೭ ತಿಂಗಳು ಬಾಕಿ ಇರುವಾಗ, ನಾವು ಪ್ರತಿ ೨ ವಾರಕ್ಕೊಮ್ಮೆ ಅಭ್ಯಾಸ ಹೈಕಿಂಗ್‌ಗೆ ಹೋಗಲು ತೀರ್ಮಾನಿಸಿದೆವು. ಮೊದಲಿಗೆ ೧೦ ಮೈಲುಗಳಷ್ಟು ತೂಕವಿಲ್ಲದೆ ನಡೆದು ಅಭ್ಯಾಸ ಮಾಡಿದೆವು. ನಂತರ ಕ್ರಮೇಣ ತೂಕವನ್ನು ಹೊತ್ತು ಅಭ್ಯಾಸ ಮಾಡುತ್ತಾ, ಕೊನೆಯ ೨-೩ ಹೈಕಿಂಗ್‌ಗಳಲ್ಲಿ ೩೦ ಪೌಂಡ್ ತೂಕದೊಂದಿಗೆ ೮-೧೦ ಮೈಲುಗಳಷ್ಟು ನಡೆದು ಅಭ್ಯಾಸ ಮಾಡಿದೆವು. ಇದು ನಿಜವಾದ ಹೈಕಿಂಗ್‌ನಲ್ಲಿ ಬಹಳ ಸಹಾಯವಾಯಿತು.

ಪ್ರತಿದಿನದ ಚಟುವಟಿಕೆಗಳು

ದಿನ ೧ – ಶಿಬಿರದ ಮುಖ್ಯ ಕಛೇರಿ / ಬೇಸ್‌ಕ್ಯಾಂಪ್‌ನಲ್ಲಿ ಇದ್ದೆವು. ಸಿಬ್ಬಂದಿಗಳಿಂದ ಕ್ಯಾಂಪ್‌ಫೈರ್ ಕಾರ್ಯಕ್ರಮ ನಡೆಯಿತು.
ದಿನ ೨ – (೨.೪ ಮೈಲ್ಸ್) ಓಲ್ಡ್ ಅಬ್ರೇಯು ಫಾರ್ಮ್‌ಗೆ ಭೇಟಿ ನೀಡಿ, ಕೋಳಿಗಳು, ಕತ್ತೆಗಳು, ಮೇಕೆಗಳು ಮುಂತಾದ ಪ್ರಾಣಿಗಳನ್ನು ನೋಡಿದೆವು ಮತ್ತು ಸಂವಹನ ನಡೆಸಿದೆವು. ಅಲ್ಲದೆ ಉತ್ತಮ ರೂಟ್‌ಬಿಯರ್ ಸವಿಯುವ ಅವಕಾಶ ದೊರೆಯಿತು.
ದಿನ ೩ – (೬ ೪ ಮೈಲ್ಸ್) ಕ್ರೇಟರ್ ಲೇಕ್ ಶಿಬಿರದಲ್ಲಿ ತಂಡದವರಿಂದ ಕ್ಯಾಂಪ್‌ಫೈರ್ ಕಾರ್ಯಕ್ರಮ ನಡೆಯಿತು. ಹಿನ್ನಲೆಯಲ್ಲಿ "ಟೂತ್ ಆಫ್ ಟೈಮ್" ಪರ್ವತದ ನೋಟ ಮನಮೋಹಕವಾಗಿತ್ತು.
ದಿನ ೪ – (೧೧ .೧ ಮೈಲ್ಸ್) ಬೋಬಿಯನ್ ಶಿಬಿರ -ನಾವು ೧೦,೦೦೦ ಅಡಿ ಎತ್ತರದ ಟ್ರೇಲ್ ಪೀಕ್ ಬೆಟ್ಟವನ್ನು ಹತ್ತಿದೆವು. ಸಂಜೆ ತಂಡದವರಿಂದ ಕ್ಯಾಂಪ್‌ಫೈರ್ ಕಾರ್ಯಕ್ರಮ ನಡೆಯಿತು.
ದಿನ ೫ – (೫.೭ ಮೈಲ್ಸ್) ಬ್ಲಾಕ್ ಮೌಂಟನ್ ಶಿಬಿರ ಯಾವುದೇ ವಿಶೇಷ ಕಾರ್ಯಕ್ರಮ ಇರಲಿಲ್ಲ.
ದಿನ ೬ ( ೩ .೪ ಮೈಲ್ಸ್ ) ಶೇಫರ್ಸ್ ಪಾಸ್ ಶಿಬಿರ ಇದು ಡ್ರೈ ಕ್ಯಾಂಪ್ ಆಗಿದ್ದರಿಂದ ಹಿಂದಿನ ದಿನದ ನೀರಿನ ಮೇಲೆ ಬದುಕಬೇಕಾಯಿತು. ಜೊತೆಗೆ ಐಚ್ಛಿಕವಾಗಿ ೯,೫೦೦ ಅಡಿ ಎತ್ತರದ ಶೇಫರ್ಸ್ ಪಾಸ್ ಬೆಟ್ಟವನ್ನು ಹತ್ತಿದೆವು. ಇದು ಡ್ರೈ ಕ್ಯಾಂಪ್ ಆಗಿತ್ತು , ನಮ್ಮ ಅದೃಷ್ಟಕ್ಕೆ ನಮಗೆ ಒಂದೇ ಡ್ರೈ ಕ್ಯಾಂಪ್ ಸಿಕ್ಕಿತು,
ದಿನ ೭ – (೯ .೭ ಮೈಲ್ಸ್) ಬೇಸ್‌ಕ್ಯಾಂಪ್‌ಗೆ ಹಿಂತಿರುಗುವ ಪ್ರಯಾಣ. ಮಾರ್ಗಮಧ್ಯೆ "ಟೂತ್ ಆಫ್ ಟೈಮ್" ೬ ಶಿಖರವನ್ನು ಹತ್ತಿ, ನಂತರ ಬೇಸ್‌ಕ್ಯಾಂಪ್‌ಗೆ ಮರಳಿದೆವು.

ಆಹಾರ

ಪ್ರತಿ ದಿನ ಬೆಳಗಿನ ಉಪಹಾರ ಮತ್ತು ಮಧ್ಯಾಹ್ನಕ್ಕೆ ಕೇವಲ ಕೆಲವು ನಟ್‌ಬಾರ್‌ಗಳು ಅಥವಾ ಕ್ರಾಕರ್‌ಗಳು ಮಾತ್ರ ದೊರೆಯುತ್ತಿತ್ತು. ರಾತ್ರಿ ಊಟಕ್ಕೆ ಎಂಆರ್‌ಐ ಪ್ಯಾಕೆಟ್ ನೀಡಲಾಗುತ್ತಿತ್ತು. ನಾನು ನನ್ನ ಆಹಾರ ನಿಯಮಗಳಿಗೆ ಅನುಗುಣವಾಗಿ ಪೀಕ್ ರಿಫ್ಯೂಲ್ ಬಟರ್‌ನಟ್ ದಾಲ್ ತರಿಸಿಕೊಂಡಿದ್ದೆ.

ವಿಶೇಷ ಸಂಗತಿಗಳು

ದಿನ ೨ ಹೊರತುಪಡಿಸಿ ಪ್ರತಿದಿನ ಮಳೆಗಾಲದ ಗುಡುಗು-ಮಿಂಚಿನ ನಡುವೆ ನಡೆದು ಮುಂದಿನ ಶಿಬಿರ ತಲುಪಬೇಕಾಯಿತು.
ದಿನ ೩, ೪ ಮತ್ತು ೫ ರಂದು ದಾರಿ ತಪ್ಪಿ, ಹೆಚ್ಚುವರಿಯಾಗಿ ೧೦ -೧೨ ಮೈಲಿಗಳು ನಡೆಯಬೇಕಾಯಿತು (ಅಲ್ಲಿ ಮಾರ್ಗಸೂಚಕ ಫಲಕಗಳಿಲ್ಲ, ನಕ್ಷೆಯ ಮೇಲೆ ಮಾತ್ರ ಅವಲಂಬಿಸಬೇಕಾಗುತ್ತದೆ).
ನಮ್ಮ ಪ್ರಯಾಣದ ವೇಳೆ ೩-೪ ಗಂಟೆಗಳ ಕಾಲ ಪರಿಸರ ಸಂರಕ್ಷಣಾ ಕಾರ್ಯ (ಸೇವಾ ಚಟುವಟಿಕೆ) ನಡೆಸಿದೆವು.

ಕೊನೆಗಿನ ಅನುಭವ

ಒಟ್ಟು ೫೦-೫೫ ಮೈಲುಗಳಷ್ಟು ಹೈಕಿಂಗ್ ಮಾಡಿದೆವು. ಇದು ನನಗೆ ಅದ್ಭುತ ಅನುಭವವಾಯಿತು. ೧೮ ಜೂಲೈ, ಬೆಳಿಗ್ಗೆ ೫ ಗಂಟೆಗೆ ನನ್ನ ತಂದೆ ವಿಮಾನ ನಿಲ್ದಾಣಕ್ಕೆ ಬಂದು ನನ್ನನ್ನು ಕರೆದುಕೊಂಡು ಬಂದರು . ಮನೆ ತಲುಪಿದಾಗ ನನ್ನ ಪ್ರಿಯ ಪಪ್ಪಿಯಾದ "ಸಿಂಬಾ" ನನ್ನನ್ನು ಸ್ವಾಗತಿಸಲು ಕಾಯುತ್ತಿದ್ದ. ಅವನನ್ನು ಕಂಡ ಕ್ಷಣದಲ್ಲೇ ನನ್ನ ಎಲ್ಲಾ ದಣಿವು ಮಾಯವಾಯಿತು.
ಒಟ್ಟಿನಲ್ಲಿ, ಇದು ನನ್ನ ಜೀವನದ ಮಹತ್ವದ ಪ್ರಯಾಣ ಮತ್ತು ಮರೆಯಲಾಗದ ಕ್ಷಣ. ಈ ಅವಕಾಶ ನೀಡಿದ ನನ್ನ ಪೋಷಕರಿಗೆ ಹೃತ್ಪೂರ್ವಕ ಧನ್ಯವಾದಗಳು.



**ಯಶಸ್ವಿನಿ ರಾಮಚಂದ್ರ**
ನ್ಯೂ ಜೆರ್ಸಿ

# ಬಣ್ಣ ಬದಲಿಸುವ ಋತುಗಳು.

**ಪ್ರ**ಕೃತಿಯನ್ನು ವೀಕ್ಷಿಸುವುದೇ ಆನಂದದ ಸಂಗತಿ, ಅದರಲ್ಲೂ ಕಾಲಕಾಲಕ್ಕೆ ಬದಲಾಗುವ ಋತುಗಳನ್ನು ನೋಡುವುದು ಕಣ್ಣಿಗೆ ಹಬ್ಬ. ಪ್ರಕೃತಿಯ ದೇವರ ಅದ್ಭುತ ಕಲೆ.
ಋತುಗಳು ಕ್ರಮವಾಗಿ ಮೂರು ಮೂರು ತಿಂಗಳಗಳ ಕಾಲ ಇರುತ್ತವೆ.
ವಸಂತ ಋತು(ಪ್ರೈಮಾವೆರಾ).
ಬೇಸಿಗೆಕಾಲ
ಶರತ್ಕಾಲ(Fall season)
ಚಳಿಗಾಲ.
ಎಲ್ಲ ಋತುಗಳಿಗೂ ಅದರದ್ದೇ ಆದ ಪ್ರಾಮುಖ್ಯತೆ ಇದೆ, ಪ್ರಕೃತಿಯು ಎಲ್ಲ ಋತುಗಳಲ್ಲಿಯೂ ತನ್ನ ಅಪ್ರತಿಮ ಸೌಂದರ್ಯವನ್ನು ಪ್ರದರ್ಶಿಸುತ್ತಾಳೆ. ಅಮೆರಿಕಾದಲ್ಲಿ ವಸಂತ ಋತು ಮಾರ್ಚ್ ತಿಂಗಳಿಂದ ಪ್ರಾರಂಭವಾಗುತ್ತವೆ, ಚಳಿಗಾಲಕ್ಕೆ ಬೋಳಾಗಿದ್ದ ಮರಗಳಿಗೆ ನವಚೈತನ್ಯ ಬಂದು ಎಲೆಗಳೆಲ್ಲ ಮತ್ತೆ ಚಿಗುರುವ ಪ್ರಕ್ರಿಯೆ ಈ ಋತುವಿನಲ್ಲಿ ನಡೆಯುತ್ತದೆ, ನಿಸರ್ಗವೆಲ್ಲ ಹಸಿರಿನಿಂದ ತುಂಬಿ ತುಳುಕುವಂತೆ ಭಾಸವಾಗುತ್ತದೆ, ಪ್ರಕೃತಿಪ್ರಿಯರಿಗಂತೂ ವಸಂತ ಋತುವನ್ನು ಕಣ್ತುಂಬಿಕೊಳ್ಳುವುದೇ ಸಂತಸದ ವಿಷಯ. ವಸಂತ ಋತುವನ್ನು ಪ್ರೈಮಾವೆರಾ (primavera) ಎಂದು ಕರೆಯುತ್ತಾರೆ. ನಂತರ ಬರುವುದೇ ಬೇಸಿಗೆಕಾಲ,ಇದು ವಸಂತ ಋತು ಮತ್ತು ಶರತ್ಕಾಲದ ನಡುವೆ ಬರುತ್ತದೆ, ದೀರ್ಘಾವಧಿ ಹಗಲು ಮತ್ತು ಅಲ್ಪಾವಧಿ ಇರುಳು ಈ ಬೇಸಿಗೆಯ ವಿಶೇಷತೆ, ಶಾಲೆಗೂ ಸಹ ವಿರಾಮವಿರುವುದರಿಂದ ಇಲ್ಲಿನ ಜನರು ಬೇಸಿಗೆಯ ಉಪಯೋಗವನ್ನು ಪಡೆಯಲು ಪ್ರಯತ್ನಿಸುತ್ತಾರೆ. ಬೇಸಿಗೆಯಲ್ಲಿ ರಾತ್ರಿ ಒಂಭತ್ತು ಗಂಟೆಯವರೆಗೂ ಕತ್ತಲಾಗುವುದಿಲ್ಲ, ಹಾಗಾಗಿ ಜನರೆಲ್ಲ ಹೆಚ್ಚು ಹೊರಗೆ ಕಾಲ ಕಳೆಯಲು ಬಯಸುತ್ತಾರೆ, ಬೀಚ್ ಹಾಗೂ ಉದ್ಯಾನವನಗಳಿಗೆ ಹೆಚ್ಚಾಗಿ ಹೋಗುತ್ತಾರೆ, ಅಲ್ಲಲ್ಲಿ ಬೇಸಿಗೆ ಉತ್ಸವಗಳು ನಡೆಯುತ್ತವೆ, ಮಕ್ಕಳಿಗೆ "ವಾಟರ್ ಗೇಮ್ಸ್ ಇರುತ್ತವೆ," "ವಾಟರ್ ಸ್ಕೀಯಿಂಗ್ " ಇಲ್ಲಿನ ಪ್ರಸಿದ್ಧ ಬೇಸಿಗೆ ಕ್ರೀಡೆಗಳು. ಇದರ ಜೊತೆಗೆ ವಾಲಿಬಾಲ್, ಫುಟ್ಬಾಲ್, ಬೇಸ್ಬಾಲ್ ಆಟಗಳನ್ನು ಆಡುತ್ತಾರೆ, ಹಾಗೂ ಹೀಗೂ ಬೇಸಿಗೆ ಕಳೆಯುತ್ತದೆ , ನಂತರ ಬರುವುದೇ ಎಲ್ಲರ ನೆಚ್ಚಿನ "ಶರತ್ಕಾಲದ ಋತು", ಇದು ಕವಿಗಳಿಗೂ ಸಹ ಪ್ರಿಯವಾದ ಕಾಲ, ಶರತ್ಕಾಲದ ಸೌಂದರ್ಯವನ್ನು ನೋಡಲೆಂದೇ ಅಮೆರಿಕಾಗೆ ಸಾವಿರಾರು ಮೈಲಿ ದೂರದಿಂದ ಬರುವವರಿದ್ದಾರೆ, ಶರತ್ಕಾಲದಲ್ಲಿ ಹಸಿರು ವರ್ಣದ ಎಲೆಗಳು ಕೆಂಪು, ಹಳದಿ, ಅಥವಾ ಕೇಸರಿ ಬಣ್ಣಕ್ಕೆ ತಿರುಗಿ ನಂತರ ಎಲೆಗಳೆಲ್ಲ ಒಣಗಿ ಉದುರಿ ಹೋಗುವ ಪ್ರಕ್ರಿಯೆ ಶರತ್ಕಾಲದಲ್ಲಿ ನಡೆಯುತ್ತದೆ. ಇದು ಅತ್ಯಂತ ವರ್ಣಮಯ ಮತ್ತು ಜನಪ್ರಿಯ ಮಾಸವಾಗಿದೆ. ಶರತ್ಕಾಲದ ಬೆಳದಿಂಗಳಿನ ಬಗ್ಗೆ ಕವಿಗಳು ಕವನಗಳನ್ನು ಸಹ ರಚಿಸಿದ್ದಾರೆ. ಆಕ್ಟೋಬರ್ -ನವೆಂಬರ್ ತಿಂಗಳಿನ ಆಸುಪಾಸಿನಲ್ಲಿ ಚಳಿಗಾಲವು ಶುರುವಾಗುತ್ತದೆ , ಇದು ಮುಂದಿನ ಮಾರ್ಚ್ ಏಪ್ರಿಲ್ ತಿಂಗಳಿನವರೆಗೆ ಇರುತ್ತದೆ, ಹಿಮ ಬೀಳುವುದು ಚಳಿಗಾಲದ ಪ್ರಮುಖ ಆಕರ್ಷಣೆ, ಹಿಮದೊಂದಿಗೆ ಆಡುವುದು ಮೋಜಿನ ಸಂಗತಿ, ಚಳಿಗಾಲದ ಸಮಯದಲ್ಲಿ ಹೊರಗೆ ಕಾಲಿಡಬೇಕೆಂದರೆ ಭಾರವಾದ ವಿಂಟರ್ ಕೋಟ್ ಗಳನ್ನು , ಕಾಲಿಗೆ ಬೂಟ್ಸ್ ಗಳನ್ನು ಧರಿಸಲೇಬೇಕು. ಸಂಜೆ ನಾಲ್ಕು ಗಂಟೆಗೆಲ್ಲ ಕತ್ತಲು ಆವರಿಸಲು ಶುರುವಾಗುತ್ತದೆ, ಚಳಿಗಾಲದಲ್ಲಿ ಹಗಲು ಕಡಿಮೆ ಇರುಳು ಹೆಚ್ಚು, ಮರಗಳೆಲ್ಲ ಎಲೆಗಳುದುರಿ ಬೋಳಾಗಿ ನಿಂತಿರುತ್ತವೆ, ಆದರೂ ಸಹ ಧೃತಿಗೆಡದೆ ಮುಂಬರುವ ಒಳ್ಳೆಯ ದಿನಗಳಿಗಾಗಿ (ವಸಂತ ಋತುವಿಗಾಗಿ) ಸಂಯಮದಿಂದ ಕಾಯುತ್ತವೆ ಮತ್ತು ಧೃಡವಾಗಿ ನಿಲ್ಲುತ್ತವೆ.
ಹೀಗೆಯೇ ಬಣ್ಣ ಬದಲಿಸುವ ಋತುಗಳು ನಮಗೆ ಒಂದು ಮಹತ್ವದ ಪಾಠವನ್ನು ಕಲಿಸುತ್ತದೆ. ಜೀವನದಲ್ಲಿ ಬದಲಾವಣೆ ಅನಿವಾರ್ಯ ಎಂಬುದನ್ನು ತಿಳಿಸಿಕೊಡುತ್ತದೆ. ಬದಲಾವಣೆಯ ಮಧ್ಯೆಯೇ ದೇವರ ಸೃಷ್ಟಿಯ ಸೌಂದರ್ಯ ಹಾಗೂ ಜೀವನದ ಅರ್ಥ ಅಡಗಿದೆ. ಧನ್ಯವಾದಗಳು



**ಎಂ.ವಿ. ಶಶಿಭೂಷಣ ರಾಜು**
ಅಮೇರಿಕ

# ಪ್ರೀತಿ, ಪ್ರೇಮ ಇತ್ಯಾದಿ .....!!

**ಆ**ಹಾ ಸವಿ ನೆನಪೇ, ಎಷ್ಟೊಂದು ಮಧುರ. ಆ ಸಿಹಿ ಭಾವನೆ ಮನ ದೇಹವೆಲ್ಲ ತುಂಬಿ, ಎಲ್ಲವ ಮರೆತು, ಒಂದು ಕ್ಷಣ ಹಾಗೆ ಒಂಟಿಯಾಗಿ ಕುಳಿತು, ಕಳೆದುಹೋದ ಸವಿ ಸಮಯವ ಮೆಲುಕು ಹಾಕಿಕೊಂಡಾಗ ಏನೋ ಮನಸಿಗೆ ತಂಪು. ನದಿ, ಸಮುದ್ರ, ತಂಗಾಳಿ, ಬೆಳದಿಂಗಳು, ಗಗನ, ಸೂರ್ಯೋದಯ ,ಸೂರ್ಯಾಸ್ತ, ಪ್ರೇಮಗೀತೆ, ಭಾವಗೀತೆ, ಪಿಸುಮಾತು, ಹುಸಿನಗೆ ಎಲ್ಲವೂ ಒಂದು ಕ್ಷಣದಲ್ಲಿ ಮೂಡಿ ಮನವೆಲ್ಲೋ ತೇಲಾಡಿ ಭಾವನೆಗೇ ಭಾವಕೊಡುವ ಹೊತ್ತು. ಇದು ಪ್ರೇಮಿ ತನ್ನ ಕಳೆದಹೋದ ಪ್ರೀತಿಯ ದಿನಗಳ ನೆನಸಿಕೊಳ್ಳುವ ಪರಿ.

ಪ್ರೇಮ ಎನ್ನುವುದು ವಾಸ್ತವಕ್ಕಿಂತ ಭ್ರಮೆಯಲ್ಲೇ ಹೆಚ್ಚು ಸೊಗಸು. ಇಷ್ಟದಂತೆ ಕಲ್ಪಿಸಕೊಳ್ಳಬಹದು. ಬೇಕಾದ ಗುಣಗಳನ್ನು ತನ್ನ ಸಂಗಾತಿಯಲ್ಲಿ ತುಂಬಬಹುದು. ಅವಾಸ್ತವ ಸಂಗತಿಗಳನ್ನು ಮನದಲ್ಲಿ ನಡೆಸಿ ನಮ್ಮ ಸಿನಿಮಾ ನಾವೇ ನೋಡಬಹದು. ಸಂಗಾತಿಯ ರೂಪ ರೇಖೆ, ನಗು, ನಡವಳಿಕೆ, ಮಾತು, ಮನಸು ಎಲ್ಲವನ್ನೂ ನಮಗೆ ಬೇಕಾದ ಹಾಗೆ ತುಂಬಿ ಸುಖಿಸಬಹುದು. ಇಬ್ಬರೇ ಎಲ್ಲೋ ಹೊರಟಂತೆ, ಅಲ್ಲಿ ಏನೋ ನಡೆದಂತೆ ಕಲ್ಪಿಸಿಕೊಂಡು ಮನದುಂಬಬಹುದು. ವಾಸ್ತವ ಜಗತ್ತನ್ನು ಮೀರಿ, ನಮ್ಮದೇ ಜಗ ಸೃಷ್ಟಿಸಿಕೊಂಡು, ಹಸಿವಿಲ್ಲದ, ನಿದ್ದೆಯಿಲ್ಲದ, ನೋವಿಲ್ಲದ, ಟೀಕೆಗಳಿಲ್ಲದ, ಬಂಧನವಿಲ್ಲದ, ಸೀಮೆಯಿಲ್ಲದ ಜಗತ್ತಿನಲ್ಲಿ ಹಾರಾಡುವುದು.

ಪ್ರೇಮದ ಬಗ್ಗೆ ಎಷ್ಟೇ ಟೀಕೆಗಳಿದ್ದರೂ, ಸಮಾಜದ ನೋಟವೇನೇ ಇದ್ದರೂ , ಎಂದಿಗೂ ಯಾವ ಮನಸ್ಸು ಸಹ ಪ್ರೀತಿ-ಪ್ರೇಮಗಳಿಂದ ತಪ್ಪಿಸಿಕೊಂಡಿಲ್ಲ. ಅಪ್ಪ-ಅಮ್ಮನ ಪ್ರೀತಿ, ಮಕ್ಕಳ ಮೇಲಿನ ಮಕ್ಕಳ ಪ್ರೀತಿ, ಸೋದರ, ಸ್ನೇಹಿತರ, ಬಂಧುಗಳ ಪ್ರೀತಿಯನ್ನು ಪಕ್ಕಕ್ಕೆ ಇಡೋಣ. ಅದು ಸಹಜವಾಗಿ ಬರುವಂತಹುದು ಮತ್ತು ಅದಕ್ಕೆ ಮನಸಿನ ಮೇಲೆ ಬೀರುವ ಪ್ರಭಾವದ ರೂಪವೇ ಬೇರೆ. ಅದೊಂದು ಸ್ವಚ್ಛ, ಹಿಂತಿರುಗಿ ಏನನ್ನೂ ಕೇಳದ ಪ್ರೀತಿ ಎಂದುಕೊಂಡರೂ ಅದು ಕೊಡುವ ಸಂತೋಷಕ್ಕೆ ಬೇರೆಯದೇ ಸ್ವರೂಪವಿದೆ. ಅದಕ್ಕೊಂದು ತೆರೆನಾದ ಮಿತಿಯಿದೆ. ಪ್ರೇಮಿಗಳ ದಿನದಂದು ಗಂಡು-ಹೆಣ್ಣಿನ ಪ್ರೀತಿ-ಪ್ರೇಮಗಳ ಬಗ್ಗೆ ಮಾತನಾಡೋಣ, ಅದಕ್ಕಿರುವ ಶಕ್ತಿ, ಮನ ಪುಳಕಿತಗೊಳಿಸುವ ಪರಿಯ ವಾಸ್ತವವನ್ನು ಒಪ್ಪಿಕೊಳ್ಳೋಣ. ಕೆಟ್ಟ ಅಥವಾ ಒಳ್ಳೆಯ, ಮಾನಸಿಕ ವ್ಯಭಿಚಾರ, ತಪ್ಪು-ಒಪ್ಪು ಇಂತಹ ವಿಚಾರಗಳನ್ನು ತರದೆ ಪ್ರಾಕ್ಟಿಕಲ್ ಆಗಿ ಮಾತನಾಡಿಕೊಳ್ಳೋಣ, ಏಕೆಂದರೆ ವಾಸ್ತವವಾಗಿ, ವೈಜ್ಞಾನಿಕವಾಗಿ ಮನಸು ಪ್ರೇಮ ಬಯಸುತ್ತದೆ, ಅದೂ ಬಹ್ವಂಶ ವಿರುದ್ಧ ಲಿಂಗಿಗಳಿಂದ. ಅಂತಹ ಪ್ರೇಮದಿಂದ ಯಾರೂ ತಪ್ಪಿಸಿಕೊಂಡಿಲ್ಲ, ತಪ್ಪಿಸಿಕೊಳ್ಳಲಾಗುವುದಿಲ್ಲ. ಹಾಗು ಪ್ರೇಮಿಸುವುದೂ, ಪ್ರೇಮಿಸಲ್ಪಡುವುದೂ ತಪ್ಪೂ ಅಲ್ಲ. ಎಂತಹ ಪ್ರೇಮ ಮನಸಿಗೆ ನೋವು ಕೊಡುವುದಿಲ್ಲ, ಇನ್ನೊಬ್ಬರಿಗೆ ತೊಂದರೆ ಕೊಡುವುದಿಲ್ಲ ಎಂದು ತಿಳಿದಿದ್ದರೆ ಸಾಕು.

ಎಲ್ಲವು ಬಿಟ್ಟು ಸ್ವಚ್ಛ ಪ್ರೇಮದ ಬಗ್ಗೆ ಮನ ತೆರೆದು ನೋಡೋಣ. ಪ್ರೇಮದಿಂದ ಕೂಡಿದ ಮನಸು ಎಲ್ಲವನ್ನು ಸುಂದರವಾಗಿ ಗ್ರಹಿಸುತ್ತದೆ. ಸುಂದರವಲ್ಲದ್ದೂ ಸುಂದರವಾಗಿ ಕಾಣಿಸುತ್ತದೆ. ಭಾವಲೋಕವೊಂದು ಸೃಷ್ಟಿಯಾಗುತ್ತದೆ. ಸಂಗಾತಿಯ ಬಗ್ಗೆ ಮನಸಿನ ತುಂಬಾ ಮಧುರ ಭಾವನೆ ತುಂಬಿಕೊಂಡು, ಸುಂದರವಾದುದನ್ನು ಕಲ್ಪಿಸಿಕೊಂಡು, ಸಂಗಾತಿಯ ಬರುವಿಕೆಗೆ, ನೋಟಕ್ಕೆ ಪರಿತಪಿಸಿ, ಕಸಿವಿಸಿಯಾಗುತ್ತದೆ. ಭೇಟಿಯಾದಾಗ ಮಾತಿನೊಳಗಿನ ಮೌನ , ಮೌನದೊಳಗಿನ ಮಾತು ಪರಸ್ಪರ ತಾಕಲಾಡಿ ಯಾವುದರ ಸ್ಪಷ್ಟತೆಯಿಲ್ಲದೆ, ಇರುವಿಕೆಯೇ ಖುಷಿಯ ಸಂಗತಿಯಾಗುತ್ತದೆ. ಪರಸ್ಪರ ಹೊಗಳಿಕೆ, ತಮ್ಮಲ್ಲಿರುವ ಯಾವುದೋ ಒಂದು ಗುಣ ಅಥವಾ ಪ್ರತಿಭೆಯಿಂದ ಒಬ್ಬರನೊಬ್ಬರು ಪ್ರಭಾವಗೊಳಿಸುವ ಪ್ರಯತ್ನ, ಪ್ರೇಮ ನಿವೇದನೆಯ ಪರಿ, ಹೊರ ಜಗತ್ತಿನ ಮರೆವು, ವಾಸ್ತವಗಳ ದಿಕ್ಕಾರ ಎಲ್ಲವೂ ಒಂದುಗೂಡಿ ಜಗತ್ತಿನಲಿ ಇರುವುದು ತಾವೊಬ್ಬರೇ ಎಂಬ ಭ್ರಮೆ ಸೃಷ್ಟಿಯಾಗುತ್ತದೆ. ಒಂಟಿಯಾಗಿದ್ದಾಗಲೂ ಆ ಜಗದಲ್ಲಿಯೇ ಇರುವ ಬಯಕೆಯಾಗುತ್ತದೆ.



ಪ್ರೇಮದಲ್ಲಿದ್ದಾಗಲೋ, ಪ್ರೇಮದ ಭಾವನೆಯನ್ನು ಗ್ರಹಿಸಿಕೊಂಡೋ, ಬೇರೆಯವರ ಪ್ರೇಮದ ಅರಿವಿನಿಂದಲೋ, ಯಾವುದೋ ಭಾವಲೋಕದಲ್ಲಿದ್ದಾಗಲೋ ಪ್ರೇಮಗೀತೆ, ಭಾವಗೀತೆ, ಹಾಡು, ಕಥೆ, ಕವನ, ಸಿನಿಮಾ ಸೃಷ್ಟಿಯಾಗುತ್ತವೆ. ಸ್ವತಃ ಎಂದಿಗೂ ಪ್ರೇಮಿಸದವರಿಂದ ಅದ್ಭುತ ಸಾಹಿತ್ಯ ಸೃಷ್ಟಿ ಆಗಿದೆ, ಅದ್ಭುತ ಸಿನಿಮಾಗಳು ಬಂದಿವೆ. (ಬರಹಗಾರರು ಅದ್ಭುತವಾಗಿ ಪ್ರೇಮದ ಬಗ್ಗೆ ಬರೆದರೆ ಅದು ಸ್ವಂತ ಅನುಭವ ಇರಬಹುದೇ ಎಂದು ಓದುಗರು ಅಂದುಕೊಳ್ಳುತ್ತಾರೆ, ಬರಹಗಾರರಿಗೆ ಅವಾಸ್ತವವಾದುದನ್ನು , ವಾಸ್ತವದಂತೆ ಚಿತ್ರಿಸುವ ಶಕ್ತಿ ಇರುತ್ತದೆ) ಅಂದರೆ ವಾಸ್ತವಕ್ಕಿಂತ ಭ್ರಮೆ ಹೆಚ್ಚು ಸಿಹಿ ಒದಗಿಸುತ್ತದೆ. ಆದ್ದರಿಂದ ಮಾನವ ಸಿಕ್ಕಿದ ಪ್ರೇಮಕ್ಕಿಂತ, ಸಿಕ್ಕದ ಪ್ರೇಮದ ಜಗಕೆ ಒಂದೊಂದು ಸಲ ಹೋಗಿ ಬರುತ್ತಿರುತ್ತಾನೆ. ಇದನ್ನು ಸಹಜವಾಗಿ ನೋಡಿದರೆ ಸಾಕು.ಇದರಲ್ಲಿ ತಪ್ಪು ಹುಡುಕುವ ಅಗತ್ಯವೂ ಇಲ್ಲ. ವಾಸ್ತವ ಜಗದ ಅರಿವಿನೊಂದಿಗೆ ಹಾರಿ ದರೆ ಆಯಿತು.

ಪ್ರೀತಿ-ಪ್ರೇಮ ಬಂಧನವನ್ನು ಇಷ್ಟಪಡುವುದಿಲ್ಲ, ಬಂಧನದ ಭಯವೂ ಅದಕ್ಕೆ ಇರುತ್ತದೆ. ತಾನು ಇಷ್ಟಪಡುವ ವ್ಯಕ್ತಿ ತನ್ನ ಜೊತೆ ಮಾತ್ರ ಮಾತನಾಡಬೇಕು, ತನನ್ನೇ ಇಷ್ಟಪಡಬೇಕು ಎನ್ನುವುದು, ತಾನೇ ಲೋಕವಾಗಿರಬೇಕು ಎನ್ನುವುದು ಪ್ರೀತಿಯ ಮಿತಿ. ಯಾರಿಗೂ ಪ್ರೀತಿಸುವುದೊಂದೇ ಕೆಲಸವಾಗಿರುವುದಿಲ್ಲ, ಸುತ್ತ ಸಮಾಜದ ಜೊತೆ ಬದುಕಬೇಕಾಗುತ್ತದೆ.ಅಲ್ಲಿ ಅನೇಕ ಪರಿಚಯಗಳಾಗುತ್ತವೆ ಎಲ್ಲಾ ಪರಿಚಯಗಳಿಗೆ ಮಿತಿ ಇರುತ್ತದೆ. ಎಲ್ಲಾ ಕಡೆ ಮನಸು ತೆರೆದುಕೊಳ್ಳುವುದಿಲ್ಲ. ಇದರ ಜೊತೆ ತನ್ನದೇ ಒಂದು ಗುರಿ ಇರುತ್ತದೆ, ಹವ್ಯಾಸವಿರುತ್ತದೆ. ಪರಸ್ಪರ ನಂಬಿಕೆ ಇರಬೇಕಾಗುತ್ತದೆ. ಅತಿಯಾದಾಗ ಯಾವುದೂ ರುಚಿಸುವುದಿಲ್ಲ.

ಇನ್ನು ಗಂಡ ಹೆಂಡತಿ ನಡುವೆ ಪ್ರೀತಿ, ಗೌರವ, ಅಭಿಮಾನ, ಹೆಮ್ಮೆ ಮತ್ತು ನಂಬಿಕೆ ಇರಬೇಕು. ಪ್ರೀತಿ ಹೇಗೆ ವ್ಯಕ್ತಪಡಿಸುವುದು, ಯಾವುದನ್ನು ಪ್ರೀತಿ ಎನ್ನುವುದು, ಈ ಪ್ರೀತಿ ಯಾವುದಿರಬಹುದು, ಒಬ್ಬರಿಗೊಬ್ಬರ ನೋವಿಗೆ ಮಿಡಿಯುವುದನ್ನು ಪ್ರೀತಿ ಎನ್ನಬಹುದೇ? ಬಹುಶ ಹೆಣ್ಣೇ ಪ್ರೀತಿ ಹೆಚ್ಚು ವ್ಯಕ್ತ ಪಡಿಸುವುದು, ಏಕೆಂದರೆ ಅವಳ ಪ್ರಪಂಚ ಮನೆ, ಗಂಡ, ಮಕ್ಕಳು. ಹೆಣ್ಣು ಪ್ರಪಂಚ ಗೆದ್ದರೂ ಕೊನೆಗೆ ಯೋಚಿಸುವುದು ತನ್ನ ಕುಟುಂಬದ ಬಗ್ಗೆ ಮಾತ್ರ. ಇನ್ನು ಪರಸ್ಪರ ಗೌರವ ಸಿಗಬೇಕಾದರೆ, ಇಬ್ಬರೂ ಗೌರವ ತರುವಂತೆ ನಡೆದುಕೊಳ್ಳಬೇಕು, ನೀನೂ ಎಲ್ಲಾ ಹೆಂಗಸರಂತೆ ಅಥವಾ ನೀನೂ ಎಲ್ಲಾ ಗಂಡಸರಂತೆ ಎಂದು ಪರಸ್ಪರ ಹೇಳಿಕೊಳ್ಳುವ ಪ್ರಸಂಗ ಬರಬಾರದು, ಅಭಿಮಾನ ಮತ್ತು ಹೆಮ್ಮೆಎನ್ನುವುದು ನಾವು ಹೇಗೆ ಮನೆಯನ್ನು ನಿಭಾಯಿಸುತ್ತೇವೆ, ಹೇಗೆ ನಮ್ಮ ಕಾರ್ಯಗಳಲ್ಲಿ ಸಕ್ಸಸ್ ಆಗುತ್ತೇವೆ ಎನ್ನುವುದರಿಂದ ಆಗುತ್ತದೆ.

ಸುಂದರವಾದ ಸಂಗತಿಗೆ, ವಸ್ತುವಿಗೆ, ಪ್ರಕೃತಿ ಸೌಂದರ್ಯಕ್ಕೆ ಮನಸು ಮಾರುಹೋಗುವುದು ಸಹಜ. ಪ್ರೇಮವೆನ್ನುವುದು ಸುಂದರ ಪ್ರಕ್ರಿಯೆ. ಅದರ ಅನುಭವ ಅಷ್ಟೇ ಸಹಜ, ಅದೊಂದು ಅಸಹಜ ನಡವಳಿಕೆ ಎಂದು ಕೊರಗುವುದು ಬೇಡ. ಆದರೆ ಅದೇ ಜೀವನವಲ್ಲ, ಅದೊಂದೇ ಖುಷಿಕೊಡುವ ಸಂಗತಿಯೂ ಅಲ್ಲ. ಅದಕ್ಕೊಂದು ಮಿತಿ ಇರಿಸಿಕೊಂಡು, ಮನಸನ್ನು ಸುಂದರಗೊಳಿಸಿಕೊಂಡು,ವಾಸ್ತವವನ್ನು ಒಪ್ಪಿಕೊಂಡು ಬದುಕನ್ನು ಹಸಿರಾಗಿಸುವುದು.

ಗಂಡು ಹೆಣ್ಣಿಗೆ ಮಧುರಗೀತೆಯಾದರೆ, ಹೆಣ್ಣು ಗಂಡಿಗೆ ಮಧುರಭಾವನೆ.

# ಕಥಾ ಸಂಕಲನ





**ರವಿ ಮಾಡೋಡಿ**
ನ್ಯೂ ಜೆರ್ಸಿ

# ನಿಕ್ಷೇಪ

**ಆ**ಕಾಶ್ ಗೆ ಡಾ.ವಿನುತಾ ಫರ್ಟಿಲಿಟಿ ಸೆಂಟರ್ ಬರುವುದಕ್ಕೆ ಇಷ್ಟವೇನು ಇದ್ದಂತಿರಲಿಲ್ಲ. ಅದೊಂತರ ಮುಜುಗರದ ಸಂಗತಿ ಎಂದೇ ಭಾವಿಸಿದ್ದ. ಮೂರು ನಾಲ್ಕು ಬಾರಿ ತಪ್ಪಿಸಿಕೊಳ್ಳುವುದಕ್ಕೆ ಪ್ರಯತ್ನಿಸಿದ್ದು ಅದೇನು ಗುಟ್ಟಾಗಿ ಉಳಿದಿರಲಿಲ್ಲ. ಕೊನೆಗೆ ಸ್ಫೂರ್ತಿಯ ಹಠಕ್ಕೋ, ಮನೆಯಯವರ ಒತ್ತಾಯಕ್ಕೊ ಏನೋ ಒಂದಕ್ಕೆ ಸೋತವರಂತೆ ಬಂದಿದ್ದ. ಅಲ್ಲಿದ್ದವರನ್ನು ಸೂಕ್ಷ್ಮವಾಗಿ ಗಮನಿಸಿ ಯಾರಾದರೂ ತನಗೆ ಗೊತ್ತಿದ್ದವರು ಇದ್ದಾರೋ ಎನ್ನುತ್ತ ನೋಡಿಕೊಂಡು ನಿಂತ. ಸದ್ಯ ಯಾರೂ ತಿಳಿದವರು ಇಲ್ಲವೆಂದ ಮೇಲೆ ಸ್ವಲ್ಪ ಸಮಾಧಾನವಾಗಿತ್ತು.

ಸಾಫ್ಟ್ವೇರ್ ದಂಪತಿಗಳಾದ ಈ ಆಕಾಶ್ ಮತ್ತು ಸ್ಫೂರ್ತಿಗೆ ಮದುವೆಯಾಗಿ ಹತ್ತು ವರುಷ ಕಳೆದಿದ್ದರೂ ಮಕ್ಕಳ ಭಾಗ್ಯವನ್ನು ಕಂಡಿರಲಿಲ್ಲ. ಅವರು ಮಗುವಿಗಾಗಿ ಪ್ರಯತ್ನಿಸಿದರೂ ಫಲ ಮಾತ್ರ ಮೊಳಕೆಯೊಡೆದಿರಲಿಲ್ಲ. ಯಾರೋ ಹೇಳಿದರೆಂದು ಸಂತಾನ ಗೋಪಾಲ ಮಂತ್ರವನ್ನು ದಿನವೂ ಪಠಿಸಿದರು, ಊರಿನಿಂದ ಯಾವುದೋ ಚೂರ್ಣವನ್ನು ತರಿಸಿ ತಿಂದರು. ಏನೇನೋ ಮಾಡಿದರು. ಆದರೆ ಏನೂ ಆಗಿರಲಿಲ್ಲ. ಕೊನೆಗೆ ವಿಧಿಯಿಲ್ಲದೇ ಸ್ಫೂರ್ತಿಯ ಸ್ನೇಹಿತೆ ಡಾ.ವಿನುತಾ ಫರ್ಟಿಲಿಟಿ ಸೆಂಟರ್ ನಲ್ಲಿರುವುದು ತಿಳಿದು ಅಲ್ಲಿಗೆ ಪರೀಕ್ಷಿಸುವುದಕ್ಕೆ ಬಂದಿದ್ದರು. ಒಂದಷ್ಟು ಸಮಯವಾದ ಮೇಲೆ ಡಾ. ವಿನುತಾ ಭೇಟಿಗೆ ಅವಕಾಶ ಅವರಿಬ್ಬರಿಗೂ ಸಿಕ್ಕಿತು. ಸ್ಫೂರ್ತಿ, ವಿನುತ ಹೈಸ್ಕೂಲಿನಲ್ಲಿ ಒಟ್ಟಿಗೆ ಓದುತ್ತಿರುವಾಗ ಗೆಳೆತಿಯರಾಗಿದ್ದರು. ಐವಿಎಫ್ ಸೆಂಟರ್ಗಳು ಲಕ್ಷ ಲಕ್ಷ ದೋಚಿ ಸರಿಯಾದ ಚಿಕಿತ್ಸೆಯನ್ನೂ ನೀಡದ ಘಟನೆಗಳನ್ನು ಕೇಳಿದ್ದ ಸ್ಫೂರ್ತಿಗೆ, ಅಲ್ಲಿ ಹೋಗಿ ಸಿಕ್ಕಿ ಹಾಕಿಕೊಂಡರೆ ಎಂಬ ಭಯದಿಂದ ಗೊತ್ತಿರುವ ವಿನುತಾ ಬಳಿಯಲ್ಲಿ ಹೋದರೆ ಒಳ್ಳೆಯ ಟ್ರಿಟ್ಮೆಂಟ್ ಸಿಗಬಹುದು, ಮೋಸಹೋಗುವುದಿಲ್ಲ ಎಂಬ ಭರವಸೆಯಲ್ಲಿ ಅವಳಲ್ಲಿ ಮಾತಾಡಿ ಅಪಾಯಿಂಟ್ಮೆಂಟ್ ಪಡೆದುಕೊಂಡಿದ್ದಳು. ಸುಮಾರು ಇಪ್ಪತ್ತು ವರ್ಷಗಳ ನಂತರ ಅವರಿಬ್ಬರೂ ಭೇಟಿಯಾಗುತ್ತಿದ್ದರು. ಸ್ಫೂರ್ತಿಗೆ ಒಳಗೊಳಗೆ ಸಂಕಟ, ನಾಚಿಕೆ. ಬಾಲ್ಯದ ಗೆಳತಿಯನ್ನು ತನ್ನ ಸಮಸ್ಯೆಯನ್ನು ಇಟ್ಟುಕೊಂಡು ಭೇಟಿಯಾಗುವುದಕ್ಕೆ ಯಾಕೋ ಮನಸ್ಸು ಅಳುಕುತ್ತಿತ್ತು. ಜೊತೆಗೆ ಈಗ ಅವಳಿಗಿರುವ ಸ್ಥಾನಮಾನಕ್ಕೆ ಸರಿಯಾಗಿ ಸ್ಪಂದಿಸದೆ ಮಾತನ್ನಾಡಿಸದಿದ್ದರೆ ಎಂದೆಲ್ಲ ಅನಿಸುತ್ತಿತ್ತಾದರೂ ಹಾಗೇನೂ ಆಗಿರಲಿಲ್ಲ. ವಿನುತಾ ಸ್ಫೂರ್ತಿಯನ್ನು ಕಾಣುತ್ತಲೇ ಹಿಂದಿನ ತನ್ನ ಪ್ರೀತಿ ವಿಶ್ವಾಸದಲ್ಲಿಯೇ ಮಾತುಗಳನ್ನು ಆಡಿದ್ದಳು. ಮನೆ, ಆಫೀಸು, ಆಕಾಶನ ಪರಿಚಯ, ಅಪ್ಪ ಅಮ್ಮ, ಊರು, ಶಾಲೆ, ಬೆಟ್ಟದಲ್ಲಿ ನೆಲ್ಲಿಕಾಯಿ ತಿಂದಿದ್ದು ಎಂದೆಲ್ಲ ಎಲ್ಲಾ ಮಾತುಗಳು ಮೂರು ನಾಲ್ಕು ನಿಮಿಷಗಳಲ್ಲಿ ಬೆಳಗಿನ ವೇಗದಂತೆ ಬಂದುಹೋಗಿತ್ತು. ಅವರಿಬ್ಬರಿಗೆ ಇನ್ನೂ ಮಾತನ್ನಾಡುವ ವಿಚಾರಗಳು ಇತ್ತಾದರೂ, ಬೇರೆ ಪೇಷಂಟ್ ಗಳು ಕಾಯುತ್ತಿರುವ ಕಾರಣಕ್ಕಾಗಿ ಅವುಗಳನ್ನೆಲ್ಲ ಸರಿಸಿ ನೇರವಾಗಿ ಸಮಸ್ಯೆಯ ಬಗ್ಗೆ ಮಾತನಾಡಬೇಕಾಯಿತು. ಸ್ಫೂರ್ತಿ, ತಾವು ಮಗುವನ್ನು ಪಡೆಯುವುದಕ್ಕೆ ಪ್ರಯತ್ನಿಸಿ ಸೋತಿರುವ ಬಗ್ಗೆ ವಿವರವಾಗಿ ಹೇಳಿಕೊಂಡಳು. ಕೂಲಂಕುಷವಾಗಿ ಮಾತುಗಳನ್ನು ಆಲಿಸಿದ ವಿನುತಾ, ಒಂದಷ್ಟು ಪ್ರಶ್ನೆಗಳನ್ನು ಇಬ್ಬರಲ್ಲಿಯೂ ಕೇಳಿ ಮಾಹಿತಿಗಳನ್ನು ಪಡೆದುಕೊಂಡು, ಅರೆ ಕ್ಷಣ ಯೋಚಿಸಿದವಳಂತೆ, ತನ್ನ ಪೇಪರ್ ಪ್ಯಾಡಿನಲ್ಲಿ ಏನೇನೋ ಬರೆದುಕೊಂಡಳು. ಅದನ್ನು ಸ್ಫೂರ್ತಿಯ ಮುಂದೆ ಹಿಡಿದು, ಕೆಳಗಿನ ಪರೀಕ್ಷೆಗಳನ್ನು ಇಬ್ಬರೂ ಮಾಡಿಸಿಕೊಂಡು ಬನ್ನಿ ಎನ್ನುತ್ತ ಹೇಳಿದ್ದಳು.

ಅಲ್ಲಿಯೇ ಇದ್ದ ಲ್ಯಾಬ್ ನಲ್ಲಿ ವಿನುತಾ ಹೇಳಿದ್ದ ಪರೀಕ್ಷೆಗಳನ್ನು ಒಂದೊಂದಾಗಿ ಮಾಡಿಸಿಕೊಂಡಿದ್ದರು. ಪರಿಣಿತ ತಜ್ಞರು, ಸ್ಫೂರ್ತಿ ಹಾಗೂ ಆಕಾಶರ ದೇಹ ಪರೀಕ್ಷೆಯನ್ನು ನಡೆಸಿದ್ದರು. ಅವರಿಬ್ಬರಿಗೂ ಆ ಕ್ಷಣದಲ್ಲಿ ಏನಾದರೂ ಸಮಸ್ಯೆಯಾಗಿದ್ದರೆ, ತಾವು ಮಕ್ಕಳನ್ನು ಪಡೆಯುವುದಕ್ಕೆ ಸಾಧ್ಯವಾಗದಿದ್ದರೆ ಎಂಬೆಲ್ಲ ಆತಂಕಗಳು ಅವರ ಮೊಗದಲ್ಲಿ ತುಂಬಿರುವುದು ಕಾಣಿಸುತ್ತಿತ್ತು. ಸ್ಫೂರ್ತಿ ತಾನು ಟೇನ್ಸ್ ಆಗಿರುವುದನ್ನು ಮರೆಮಾಚಲು ಆಕಾಶ್ ಗೆ ಭಯಬೇಡ ಎನ್ನುತ್ತಿದ್ದದ್ದು ಹಾಸ್ಯವಾಗಿ ಕಂಡಿತು. ಒಂದು ದೇಹದಿಂದ ಮತ್ತೊಂದು ದೇಹವನ್ನು ಪಡೆಯಲು ಎಂತಹ ಪರೀಕ್ಷೆಗಳು. ಅಡಿಯಿಂದ ಮುಡಿಯವರೆಗೆ ಏನೇನು ಪರೀಕ್ಷೆಗಳಿಗೆ ತಮ್ಮನ್ನು ಒಡ್ಡಿಕೊಂಡು ಹೊರಬರುವಾಗ ಇಬ್ಬರೂ ಸುಸ್ತಾಗಿ ಹೊರಬಂದಿದ್ದರು. ಇನ್ನು ಯಾವಾಗ ರಿಪೋರ್ಟ್ ಬರುವುದೋ, ವಿನುತಾ ಏನು ಹೇಳುತ್ತಾಳೋ ಎಂಬ ಆತಂಕವನ್ನು ಬಚ್ಚಿಟ್ಟುಕೊಳ್ಳಬೇಕಾಗಿತ್ತು.

ನರ್ಸವೊಬ್ಬಳು ಹೊರಕ್ಕೆ ಬಂದು ವಿನುತಾ ಮೇಡಂ ನೋಡಿ ಎಂದು ರಿಪೋರ್ಟ್ಗಳನ್ನು ಅವರ ಕೈಗಿತ್ತು ಹೇಳುವಾಗ ಆಗಲೇ ಮೂರು ನಾಲ್ಕು ಗಂಟೆ ಕಳೆದಿತ್ತು. ಅವರಿಬ್ಬರಿಗೂ ರಿಪೋರ್ಟ್ ಬಂದಿದೆ ಎನ್ನುವುದಕ್ಕೆ ಖುಷಿಯಾಗಬೇಕೋ, ಒಳಕ್ಕೆ ಕರೆಯುತ್ತಿದ್ದಾರೆ ಎನ್ನುವುದಕ್ಕೆ ಸಂತೋಷಪಡಬೇಕೋ ಎಂಬುದು ಗೊತ್ತಾಗದೆ ಭಯದಲ್ಲಿಯೇ ಒಳಕ್ಕೆ ಹೋಗಿದ್ದರು. ದಿನಕ್ಕೆ ಹತ್ತಾರು ಪೇಶಂಟ್ ಗಳನ್ನು ನೋಡುವ ವಿನುತಾಗೆ ಅದರ ಸಾಲಿಗೆ ಮತ್ತೊಂದು ಎಂದು ಸ್ಫೂರ್ತಿಯನ್ನು ನೋಡುವ ಹಾಗಿರಲಿಲ್ಲ. ಕೂಲಂಕಷವಾಗಿ ಒಂದೊಂದಾಗಿ ರೀಪೋರ್ಟ್ ಗಳನ್ನು ನೋಡುತ್ತಿದ್ದರೆ ಎದುರಿಗೆ ಕುಳಿತಿದ್ದ ಅವರಿಬ್ಬರಿಗೆ ಏನಾದರು ಸಮಸ್ಯೆಯಿದೆ ಎಂದರೆ ಮುಂದೆ ಏನು ಮಾಡಬೇಕೆಂಬುದೇ ಹೆಚ್ಚು ತಲೆಯಲ್ಲಿ ಓಡಾಡಿತು. ಆದರೆ ವಿನುತಾ ಹಾಗೇನು ಹೇಳಿರಲಿಲ್ಲ. ನಗುನಗುತ್ತಲೇ "ನಿಮ್ಮ ಎಲ್ಲಾ ರಿಪೋರ್ಟ್ ಗಳು ಸರಿಯಾಗಿ ಇವೆ. ತನಗೆ ಏನೂ ಸಮಸ್ಯೆ ಕಾಣುತ್ತಿಲ್ಲ. ನೀವು ಮಗುವಿಗಾಗಿ ಇನ್ನಷ್ಟು ದಿನ ಪ್ರಯತ್ನಿಸಿ ನೋಡಿ. ಅದಕ್ಕೆ ಪೂರಕವಾಗಿ ಮಾತ್ರೆಗಳನ್ನು ಬರೆದುಕೊಡುವೆ. ಆದರೆ ಒಂದು ವಿಷಯ ಆದಷ್ಟು ಸ್ಟ್ರೆಸ್ಸನ್ನು ಕಡಿಮೆ ಮಾಡಿಕೊಳ್ಳಿ. ಒತ್ತಡಕ್ಕೆ ಸಿಲುಕಬೇಡಿ" ಎಂದು ಅವರಿಬ್ಬರಿಗೂ ಅವಳು ತಿಳಿಸಿದಾಗ ಪ್ರವಾಹಕ್ಕೆ ಸಿಲುಕಿದ ದೋಣಿ ದಡಕ್ಕೆ ಸೇರಿದಂತೆ ನಿರಾಳಗೊಂಡಿದ್ದರು.

ಸ್ಫೂರ್ತಿ ಮತ್ತು ಆಕಾಶ್ ಗೆ ಬದುಕಿನ ಬಗ್ಗೆ ಹೊಸ ಭರವಸೆ ಸಿಕ್ಕುತ್ತಿದ್ದಂತೆ ಉತ್ಸಾಹ ಹೆಚ್ಚಿತ್ತು. ಮನೆಯಲ್ಲಿ ಕುಳಿತು ತಾವು ಮುಂದೆ ಏನು ಮಾಡಬೇಕು. ಏನು ಮಾಡಬಾರದು ಎಂಬುದರ ಬಗ್ಗೆ ದೊಡ್ಡ ಚರ್ಚೆ ನಡೆಸಿದ್ದರು. ದಿನಾ ಬೆಳಗ್ಗೆ ಆರು ಗಂಟೆಗೆ ಏಳಬೇಕು, ನೆನೆಸಿಟ್ಟ ಬಾದಾಮಿ ತಿನ್ನಬೇಕು, ಒಂದು ಗಂಟೆ ಯೋಗ , ವ್ಯಾಯಮ ಮಾಡಬೇಕು, ಕೋಲೆಸ್ಟೆರಾಲ್ ಫುಡ್, ಜಂಕ್ ಫುಡ್ ತಿನ್ನಬಾರದು, ಹಣ್ಣು ಸೊಪ್ಪು ದಿನದ ಊಟದಲ್ಲಿ ಬಳಸಿಕೊಳ್ಳಬೇಕು, ಸ್ವಿಗ್ಗಿ, ಜೋಮಾಟ್ಯೋ ದಿಂದ ಆರ್ಡರ್ ಮಾಡಬಾರದು, ಮನೆಯ ಊಟವನ್ನೇ ಮಾಡಬೇಕು, ಸಂಜೆ ಏಳುಗಂಟೆಯೊಳಗೆ ಆಫೀಸಿನ ಕೆಲಸವನ್ನು ಮುಗಿಸಿಕೊಂಡು ಯಾವುದೇ ಕಾರಣಕ್ಕೂ ಒತ್ತಡವನ್ನು ಮಾಡಿಕೊಂಡು ಸಿಟ್ಟನ್ನು ಮಾಡಿಕೊಳ್ಳಬಾರದು ಎಂಬಂತಹ ದೊಡ್ಡ ಲಿಸ್ಟ್ ಸಿದ್ಧಪಡಿಸಿ, ಮಾನಸಿಕವಾಗಿ ಒಪ್ಪಿ, ಸಹಿ ಹಾಕುವುದು ಮಾತ್ರವೇ ಬಾಕಿ ಉಳಿದಿತ್ತು . ಬದುಕಿನ ಮೂಡಣದಲ್ಲಿ ಬರುವ ನೇಸರಕ್ಕೆ ಕಾತರರಿಸುವ ತಾವರೆಯಂತೆ ತಮಗೆ ತಾವೇ ನಿಬಂಧನೆಯನ್ನು ಹಾಕಿಕೊಂಡು ಆ ಸ್ಥಿತಿಯ ಬರುವಿಕೆಗಾಗಿ ಮನಃಪೂರ್ವಕವಾಗಿ ಪಾಲಿಸುವುದಕ್ಕೆ ಒಪ್ಪಿಕೊಂಡಿದ್ದರು. ಅವರ ಮೊದಲ ವಾರದ ಉತ್ಸಾಹವಂತೂ ಹೇಳತೀರದು. ನಿಯಮಗಳನ್ನು ಹೆಚ್ಚು ಉಲ್ಲಂಘಿಸಿದಂತೆ ಯಾರಿಗೂ ಅನ್ನಿಸಲಿಲ್ಲ. ಒಂದು ಬಾರಿ ಒಂದಷ್ಟು ಹಣ್ಣುಗಳನ್ನು ಸ್ಫೂರ್ತಿ ಕತ್ತರಿಸಿ, ಆಕಾಶ್ ಗೆ ತಂದು ಕೊಟ್ಟಿದ್ದಳು. ಆದರೆ ಆಕಾಶ್ ತನ್ನ ಕೆಲಸದ ಒತ್ತಡದಲ್ಲಿ ತಿನ್ನುವುದನ್ನೇ ಮರೆತುಬಿಟ್ಟಿದ್ದ. ಎಷ್ಟೋ ಹೊತ್ತಿನ ಬಳಿಕ ನೋಡಿದ ಅವಳು, ಅವನನ್ನು ಕಣ್ಣಿನಲ್ಲಿಯೇ ಗದರಿಸಿ, ಪ್ರೀತಿಯನ್ನು ಮೈಗೆ ಮೆತ್ತಿಕೊಂಡು ತಾನೇ ಅವನಿಗೆ ತಿನ್ನಿಸಿದ್ದು ಮನೆಯಲ್ಲಿಯೇ ಹೊಸ ಮಧುಚಂದ್ರವನ್ನು ಹುಟ್ಟುಹಾಕಿದಂತೆ ಭಾಸವಾಗಿತ್ತು.

ಅವತ್ತು ಮಧ್ಯಾಹ್ನ ಸ್ಫೂರ್ತಿ ಇದ್ದಕ್ಕಿದ್ದ ಹಾಗೆ ತಲೆ ನೋಯುತ್ತದೆ ಎಂದು ಆಫೀಸ್ ನಿಂದ ಮನೆಗೆ ಮಧ್ಯಾಹ್ನವೇ ಬಂದು ಮಲಗಿದ್ದಳು. ಅವಳು ಸಂಜೆ ಆರರವರೆಗೆ ಏಳದಿದ್ದಾಗ ಹಾಸಿಗೆ ಬಳಿಗೆ ಹೋಗಿ ಆಕಾಶ್ ಅವಳನ್ನು ವಿಚಾರಿಸಿದ್ದ. ಅವಳ ಮುಖ ಬಾಡಿತ್ತು. ಕಣ್ಣುಗಳು ಕೆಂಪಾಗಿದ್ದವು. ದೇಹದಲ್ಲಿ ಉತ್ಸಾಹವಿರಲಿಲ್ಲ. ಜ್ವರ ಬಂದವರಂತೆ ಕಾಣುತ್ತಿದ್ದಳು. ಥರ್ಮೋಮೀಟರ್ ನಲ್ಲಿ ಟೆಮ್ಪ್ರೇಚರ್ ನೋಡಿದರೆ ಜ್ವರವಿದ್ದ ಹಾಗೆ ಕಾಣಿಸಿರಲಿಲ್ಲ. ಆಸ್ಪತ್ರೆಗೆ ಹೋಗೋಣವೆಂದರೂ ಬೇಡವೆನ್ನುತ್ತ ಮನೆಯಲ್ಲಿದ್ದ ಡೋಲೋ ಮಾತ್ರೆಯೊಂದನ್ನು ತಿಂದಿದ್ದಳು. ರಾತ್ರಿಯ ಊಟಕ್ಕೆ ಆಕಾಶ್ ಕೊಚ್ಚಕ್ಕಿ ಗಂಜಿಯನ್ನು ಮಾಡಿಕೊಂಡಿದ್ದ. ಊಟದ ಶಾಸ್ತ್ರವನ್ನು ಮಾಡಿ ಮತ್ತೆ ಅವಳು ಮಲಗಿದ್ದಳು. ಬೆಳಗಾಗುವಾಗ ಅಂತಹ ತಲೆನೋವು ಇರಲಿಲ್ಲ. ಆದರೆ ಮನಸ್ಸು ಮಾತ್ರ ಕುಗ್ಗಿಹೋಗಿತ್ತು. ಬಹುಶಃ ಆ ಒಂದು ವಿಚಾರ ತೂರಿಕೊಳ್ಳದಿದ್ದರೆ ಎಲ್ಲವೂ ಎಂದಿನಂತೆ ನಡೆಯುತ್ತಿದ್ದವು.

ಆಸ್ಪತ್ರೆಗೆ ಹೋಗಿ ಒಂದು ವಾರ ಕಳೆದಿರಬಹುದಷ್ಟೇ. ಡಾ.ವಿನುತಾ, ಸ್ಫೂರ್ತಿಗೆ ಕಾಲ್ ಮಾಡಿ ಸ್ವಲ್ಪ ಮಾತನ್ನು ಆಡುವುದಿದೆ ಬಾ ಎಂದಿದ್ದಕ್ಕೆ ಸ್ಫೂರ್ತಿ ಅವರ ಆಫೀಸಿಗೆ ಹೋಗಿ ಅವರನ್ನು ಭೇಟಿಯಾಗಿದ್ದಳು. ಸ್ನೇಹಿತೆಯಾಗಿದ್ದರಿಂದ ವಿನುತಾಗೆ ತನ್ನೊಳಗಿರುವ ವಿಚಾರವನ್ನು ಹೇಗೆ ಹೇಳಬೇಕೆಂದು ಅರ್ಥವಾಗಿರದೇ ಹಾಗೆ ಕುಳಿತಿದ್ದಳು. ಗಂಭೀರ ವದನವನ್ನು ಗುರುತಿಸಿದ ಸ್ಫೂರ್ತಿ, ಮಾತಾಡಬೇಕೆಂದು ಧೈರ್ಯವನ್ನು ಕೊಟ್ಟ ಮೇಲೆ ವಿನುತಾ ಪ್ರಾರಂಭಿಸಿದ್ದಳು. ಡಾ.ವಿನುತಾ ಮೊನ್ನೆಯ ಇಬ್ಬರ ಪರೀಕ್ಷೆಯನ್ನು ಮಾಡಿದ ರಿಪೋರ್ಟ ನ್ನು ಕೈಯಲ್ಲಿರಿಸಿ ಹೇಳುತ್ತಿದ್ದಳು.

"ಸ್ಫೂರ್ತಿ, ನಿನ್ನ ಸ್ನೇಹಿತೆಯಾಗಿ ಮಾತ್ರ ಮಾತನ್ನು ಆಡುತ್ತಿರುವೆ. ಸಾಮಾನ್ಯವಾಗಿ ಜನರು ಆಡಿಕೊಳ್ಳುವ ಮಾತನ್ನು ಕೇಳಿರಬಹುದು. ಎಷ್ಟೇ ಪ್ರಯತ್ನಿಸಿದರೂ ಮಕ್ಕಳಾಗಿಲ್ಲದಿರುವಾಗ ಅದಕ್ಕೆ ಕಾರಣ ಹೆಣ್ಣು ಮಾತ್ರವೇ ಆಗಿರುತ್ತಾಳೆ ಅಂದುಕೊಳ್ಳುತ್ತಾರೆ. ಆದರೆ ಅದಕ್ಕೆ ಸಮವಾಗಿ ಪುರುಷನೂ ಕಾರಣನಿರುತ್ತಾನೆ. ಗಂಡಸು ಸೆಕ್ಸ್ ಮಾಡುತ್ತಾನೆ, ಅವನಿಂದ ವೀರ್ಯ ಬರುತ್ತದೆ ಎಂದಾಕ್ಷಣ ಮಕ್ಕಳಾಗುತ್ತದೆ ಎಂದಲ್ಲ. ಅದರಲ್ಲಿ ಫಲವತ್ತತೆ ಇರುವ ವೀರ್ಯ ಬೇಕಾಗುತ್ತದೆ. ಆಕಾಶ್ ನ ವೀರ್ಯವನ್ನು ಮತ್ತು ಆತನ ಅದರ ಉತ್ಪಾದಕ ಕ್ರಿಯೆಯನ್ನು ಪರೀಕ್ಷಿಸುವಾಗ ನಮಗೆಲ್ಲ ಅಚ್ಚರಿ ಎನಿಸಿತ್ತು. ಅವನಲ್ಲಿ ಗರ್ಭಧಾರಣೆಗೆ ಬೇಕಾದ ಫಲವತ್ತತೆಯ ಧಾತುಗಳೇ ಇರಲಿಲ್ಲ. ಉತ್ಪಾದಕತೆಯೂ ಕೂಡ ಅಸಹಜ ಮತ್ತು ಅಸಮರ್ಪಕವಾಗಿವೆ. ಇಂತಹ ಲಕ್ಷಣಗಳು ಸಾವಿರಕ್ಕೆ ಒಂದಿಬ್ಬರಲ್ಲಿ ಕಾಣಬಹುದು. ಫಲಹೀನ ವೀರ್ಯ ಉತ್ಪಾದಕದಿಂದ ಗರ್ಭಧಾರಣೆ ಅಸಾಧ್ಯ.

ಇಂತಹ ಸಮಸ್ಯೆಗೆ ಇದುವರೆಗೂ ಯಾವ ಚಿಕಿತ್ಸೆಯೂ ಬಂದಿಲ್ಲ. ಎರಡೆರಡು ಬಾರಿ ಆಕಾಶ್ ನನ್ನು ನಾವು ಪರೀಕ್ಷಿಸಿದಾಗಲೂ ಅದೇ ಫಲಿತಾಂಶವೇ ಬಂತು. ಮೊನ್ನೆಯೇ ಹೇಳಬೇಕೆಂದುಕೊಂಡಿದ್ದೆ. ಆದರೆ ಆಕಾಶ್ ಎದುರಿನಲ್ಲಿ ಹೇಳುವುದಕ್ಕೆ ಸಾಧ್ಯವಾಗದೆ ನಿನ್ನನ್ನು ಪ್ರತ್ಯೇಕವಾಗಿ ಕರೆಯಿಸಿ ಹೇಳಬೇಕಾಯಿತು. ನನಗೆ ಗೊತ್ತಿದೆ ಸ್ಫೂರ್ತಿ. ಈ ವಿಚಾರ ನಿನಗೆ ಆಘಾತವನ್ನು ತರುತ್ತದೆ ಎಂದು. ಆದರೆ ನಾನು ಒಬ್ಬ ನಿನ್ನ ಸ್ನೇಹಿತೆಯಾಗಿ ಹೇಳುತ್ತಿರುವೆ. ಆಕಾಶ್ ನಿಂದ ಮಕ್ಕಳಾಗುವ ಸಾಧ್ಯತೆಗಳು ಇಲ್ಲವೇ ಇಲ್ಲ" ಎನ್ನುತ್ತ ಗಂಭೀರವಾಗಿ ವಿನುತಾ ಸ್ಫೂರ್ತಿಗೆ ಹೇಳುತ್ತಿದ್ದರೆ ತನ್ನ ಕನಸಿನ ಮನೆಯೇ ಕುಸಿದು ತಲೆಯ ಮೇಲೆ ಬಿದ್ದ ಅನುಭವವಾಗಿತ್ತು. ಮುಂದೆ ಏನು ಮಾತನ್ನೂ ಆಡಲಾಗದೆ ಮನೆಗೆ ಬಂದಿದ್ದಳು.

ಸ್ಫೂರ್ತಿ ಆಫೀಸಿಗೆ ರಜೆಯನ್ನು ತೆಗೆದುಕೊಂಡಿದ್ದರಿಂದ ಮನೆಯಲ್ಲಿಯೇ ಇದ್ದಳು. ಅವಳ ಮನಸ್ಸು ಹಿಂದಿನಂತೆ ಸಹಜವಾಗಿ ಇರಲಿಲ್ಲ. ಯಾರೊಂದಿಗೂ ಹೆಚ್ಚು ಮಾತನಾಡಲಿಲ್ಲ. ಏನನ್ನೋ ಯೋಚಿಸುತ್ತ ಕುಳಿತ್ತಿದ್ದಳು. ಆಕಾಶ್ ಅವಳ ಭುಜವನ್ನು ಕುಲುಕಿ ಏನಾಯಿತು ಎಂದು ಅವಳ ಬೇಸರವನ್ನು ತಿಳಿದುಕೊಳ್ಳಲು ಹತ್ತಾರು ಸಲ ವಿಚಾರಿಸಿದ್ದ. ಆಫೀಸಿನಲ್ಲಿ ಏನಾದರೂ ಆಗಿದಿಯೋ, ತನ್ನ ಅಮ್ಮ ಏನಾದರೂ ಹೇಳಿದಳೋ ಎಂದೆಲ್ಲ ಕೇಳಿ ನಡೆದಿರಬಹುದಾದ ಕಾರಣಗಳನ್ನು ತಾನೇ ಊಹಿಸಿಕೊಳ್ಳುತ್ತ ತಿಳಿಯುವುದಕ್ಕೆ ಯತ್ನಿಸಿದ. ಆದರೆ ಅವಳ ವಿಚಿತ್ರವಾದ ಬಿಸಿಯುಸಿರು ಆಕಾಶ್ ಕೈಗೆ ತಾಗಿಸಿ ಏನಿಲ್ಲ ಎನ್ನುತ್ತ ಒಂದು ಪದದ ಉತ್ತರವನ್ನು ಕೊಟ್ಟು ರೂಮಿಗೋ ಮನೆಯ ಎದುರಿನ ಪಾರ್ಕಿಗೋ ಹೋಗಿಬಿಡುತ್ತಿದ್ದಳು. ಅವಳ ಹಿಂದೆ ಸಾಗಿದ್ದರೂ ಮೌನವೇ ಆ ಕ್ಷಣದ ಉತ್ತರದಂತೆ ಅನ್ನಿಸುತ್ತಿತ್ತು. ಯಾಕೋ ಅವಳು ಹೆಚ್ಚು ಒಂಟಿಯಾಗಿರುವುದಕ್ಕೆ ಬಯಸುತ್ತಿದ್ದಳು. ರಾತ್ರಿ ಎಷ್ಟೋ ಹೊತ್ತಿನವರೆಗೆ ಮನೆಯ ಬಾಲ್ಕನಿಯಲ್ಲಿ ಕುಳಿತು ಕತ್ತಲನ್ನು ನೋಡುತ್ತಿದ್ದಳು . ಅವಳ ಅಮ್ಮ ಬೆಳಗ್ಗೆಯಿಂದ ಐದಾರು ಬಾರಿ ಕಾಲ್ ಮಾಡಿದರೂ ಅವಳಿಗೂ ಉತ್ತರವನ್ನು ನೀಡಿರಲಿಲ್ಲ.

ಸ್ಫೂರ್ತಿಗೆ ಮಗುವನ್ನು ಪಡೆಯಲೇಬೇಕೆಂಬ ಉತ್ಕಟ ಆಸೆ ಅವಳನ್ನು ಆವರಿಸಿಬಿಟ್ಟಿತ್ತು. ತಾನು ಇನ್ನೂ ಮಕ್ಕಳನ್ನು ಪಡೆಯುವುದಕ್ಕೆ ಸಾಧ್ಯವಿಲ್ಲ ಎಂಬ ಸತ್ಯವನ್ನು ನಂಬಲಾರಳು. ವಾಸ್ತವದ ನೆರಳು ಬೆನ್ನಿಗೆ ಅಂಟಿ ಸಾಗಿಬರುವುದನೆಲ್ಲ ನೆನಪಿಸಿಕೊಳ್ಳುವಾಗಲೆಲ್ಲ ಇದನ್ನು ಹೇಗೆ ಸ್ವೀಕರಿಸಬೇಕು ಎಂಬುದು ಅರ್ಥವಾಗುತ್ತಿರಲಿಲ್ಲ. ಆಕಾಶ್ ನಿಂದ ಮಕ್ಕಳನ್ನು ಪಡೆಯಲು ಸಾಧ್ಯವಿಲ್ಲ ಎನ್ನುವುದನ್ನು ಯಾರಲ್ಲಾದರೂ ಹೇಳಿಕೊಳ್ಳುವುದಕ್ಕೆ ಸಾಧ್ಯವೇ ಎಂದು ಯೋಚಿಸಿದಳು. ಯಾರಿಗಲ್ಲದಿದ್ದರೂ ತನ್ನ ತಂದೆ ತಾಯಿಗೆ ತಿಳಿಸಬೇಕೆಂದು ಅಂದುಕೊಂಡಳು. ಆದರೆ ಅದನ್ನು ಎಣಿಸಿಕೊಂಡಾಗ ಒಮ್ಮೆ ಕಂಪನಗೊಂಡಳು. ಬಹುಶಃ ತಂದೆ ತಾಯಿ ಏನು ಹೇಳಬಹುದೆಂದು ಅವಳು ಚೆನ್ನಾಗಿ ಊಹಿಸಿದ್ದಳು.

ಮೊದಲೇ ಲವ್ ಮಾಡಿ ಆಕಾಶ್ ನನ್ನು ಮದುವೆಯಾಗಿರುವುದಕ್ಕೆ ಅವರಿಗೆ ಸಮಾಧಾನವಿರಲಿಲ್ಲ. ಬಹಿರಂಗವಾಗಿ ಅಲ್ಲದಿದ್ದರೂ ತಮ್ಮ ಮಾತಿನಲ್ಲಿ ಅಸಮಾಧಾನವನ್ನು ತೋರಿಸುತ್ತಿದ್ದರು. ಈಗ ಆತನಿಂದ ಮಕ್ಕಳನ್ನು ಪಡೆಯುವುದಕ್ಕೆ ಸಾಧ್ಯವಿಲ್ಲ ಎಂದರೆ ವಿಚ್ಛೇದನ ಕೊಡಿಸದೇ ಬಿಡುವರಲ್ಲ ಎಂಬ ಸತ್ಯ ಕಣ್ಣ ಮುಂದೆ ಬಂದಿತು. ಹೆಚ್ಚು ಯೋಚಿಸುತ್ತಾ ಹೋದಂತೆ ಒಂದಂತೂ ಅವಳಿಗೆ ಸ್ಪಷ್ಟವಾಗಿತ್ತು. ಆಕಾಶ್ ನನ್ನು ಬಿಟ್ಟು ಹೋಗುವುದನ್ನು ಊಹಿಸಿಕೊಳ್ಳುವುದಕ್ಕೆ ಎಂದಿಗೂ ಅವಳಿಗೆ ಸಾಧ್ಯವಿರಲಿಲ್ಲ. ಸ್ಫೂರ್ತಿಗೆ ಆಕಾಶ್ ಪರಿಚಯವಾದಾಗಿನಿಂದ ಅವನ ಬಗ್ಗೆ ನಂಬಿಕೆಯ ಭಾವ ಒಳ ಮನಸ್ಸಿನಲ್ಲಿ ಅಚ್ಚಾಗಿ ಹುದುಗಿಹೋಗಿತ್ತು. ಅಷ್ಟೊಂದು ಅದು ಸುಲಭವಾಗಿ ಕರಗಿ ಕಳೆದುಕೊಳ್ಳುವ ಭಾವವಾಗಿರಲಿಲ್ಲ. ತಮಗೆ ಎದುರಾಗಿದ್ದ ಎಷ್ಟೋ ಬದುಕಿನ ಸಮಸ್ಯೆಗಳನ್ನು ಲೀಲಾಜಾಲವಾಗಿ ಇಲ್ಲವಾಗಿಸಿದ್ದ ಆಕಾಶ್, ಈಗ ಆತನೇ ತನ್ನ ಸಮಸ್ಯೆಯಾಗಿಸಿ ಅಪರಾಧಿಯಂತೆ ನಿಲ್ಲಿಸುವುದನ್ನು ಯಾಕೋ ಅವಳಿಗೆ ಒಪ್ಪಿಕೊಳ್ಳುವುದಕ್ಕೆ ಸಿದ್ಧಳಾಗಿರಲಿಲ್ಲ. ಅವರಿಬ್ಬರ ಬದುಕಿನಲ್ಲಿ ಪ್ರೀತಿ, ಪ್ರೇಮ , ಸಹಕಾರ ಬಾಂಧವ್ಯ ಭಾವಗಳು ಯಾವತ್ತೂ ಕಡಿಮೆ ಮಾಡದಿರುವಾಗ ಇದೊಂದೇ ಕಾರಣಕ್ಕೆ ಬಿಟ್ಟು ಹೋಗುವುದು ಸಮ್ಮತವಾಗಿರಲಿಲ್ಲ. ಹಾಗಂತ ತನ್ನಿಂದ ಮಗುವನ್ನು ಧರಿಸಿಕೊಳ್ಳುವುದು ಸಾಧ್ಯವಾಗದಿರುವಾಗ ಅದನ್ನು ಬಿಟ್ಟುಬಿಡುವ ಯೋಚನೆಯೂ ಅಸಾಧ್ಯವೆನಿಸುತ್ತಿತ್ತು. ಇಂತಹ ಸ್ಫೂರ್ತಿಯ ಅಂತರಾಳದಲ್ಲಿ ಹುದುಗಿರುವ ತುಮುಲಗಳಾವುದನ್ನೂ ಅರಿಯದ ಆಕಾಶ್ ಗೆ, ಅವಳನ್ನು ಹೇಗೆ ಸಮಾಧಾನಿಸಬೇಕೆಂದು ಅರ್ಥವಾಗದೇ ಚಡಪಡಿಸುತ್ತಿದ್ದ.

ಒಂದೆರಡು ದಿನಕ್ಕೆ ಅವಳ ಬೇಗುದಿ ಕಡಿಮೆಯಾಗದಿದ್ದಾಗ ಅವಳ ಬೇಸರಕ್ಕೆ ತಾನೇ ತಾನೇ ಏನಾದರೂ ತಪ್ಪು ಮಾಡಿರುವ ಶಂಕೆ ಆಕಾಶ್ ಗೆ ಬಲವಾಗಿ ಕಾಡಿತ್ತು. ಎರಡು ಮೂರು ವಾರದಲ್ಲಿ ಆಗಿರುವುದೆಲ್ಲ ನೆನಪಿಸಿಕೊಂಡಿದ್ದನಾದರೂ ಹೇಳಿಕೊಳ್ಳುವಂತಹ ಯಾವ ಘಟನೆಯೂ ನೆನಪಿನಲ್ಲಿ ಸುಳಿಯಲಿಲ್ಲ. ಸ್ನಾನವಾದ ಮೇಲೆ ಹಾಸಿಗೆಯ ಮೇಲೆ ಟವೆಲ್ ಹಾಕಿದ್ದು, ಆಫೀಸಿನಿಂದ ಬರುವಾಗ ಕೊತ್ತಂಬರಿ ಸೊಪ್ಪು ತರುವುದನ್ನು ಮರೆತಿದ್ದು, ಯಾವುದೋ ಸಿನಿಮಾಕ್ಕೆ ಕರೆದುಕೊಂಡು ಹೋಗದಿರುವುದು, ಅವಳ ಅಮ್ಮನ ಬರ್ತಡೆಗೆ ವಿಶ್ ಮಾಡದಿರುವುದು ಹೀಗೆ ಸಿಲ್ಲಿ ವಿಷಯಗಳೇ ತಲೆಗೆ ಬಂದಿದ್ದವು. ಅವಳು ಮೂಡಿ ಹುಡುಗಿ. ಇವೆಲ್ಲ ತನಗೆ ಸಿಲ್ಲಿ ಅನ್ನಿಸಿದ್ದರೂ ಅವಳಿಗೆ ಅವು ಪರ್ವತದಷ್ಟು ದೊಡ್ಡ ವಿಚಾರಗಳಾಗಿ ಕಂಡಿದ್ದರೂ ಸಾಕು. ಆಫೀಸಿನಲ್ಲಿ ಕುಳಿತು ತನ್ನಿಂದ ಏನಾದರೂ ತಪ್ಪಾಗಿದೆಯೇ ಯೋಚಿಸುತ್ತಿದ್ದ. ಯಾವುದಕ್ಕೂ ಇರಲಿ ಎನ್ನುತ್ತ ನನ್ನಿಂದ ಏನಾದರೂ ತಪ್ಪುಗಳು ಆಗಿದ್ದರೆ ಸ್ವಾರಿ ಎಂದು ವ್ಯಾಟ್ಸಆ್ಯಪ್ ಮೆಸೇಜ್ ಒಂದನ್ನು ಅವಳಿಗೆ ಕಳುಹಿಸಿದ್ದ. ಎಷ್ಟೋ ಹೊತ್ತಿನ ಬಳಿಕ ಮೊಬೈಲ್ ನಲ್ಲಿ ನೀಲಿ ಎರಡು ರೇಖೆಗಳು ತೋರಿಸಿದ್ದು ಬಿಟ್ಟರೇ ಅವಳಿಂದ ಯಾವ ಪ್ರತಿಕ್ರಿಯೆಗಳೂ ಬರಲಿಲ್ಲ.

ಆಕಾಶ್ ಗೆ ಅವಳ ವರ್ತನೆಯಲ್ಲಿ ದೊಡ್ಡ ವಿಚಿತ್ರವೆನಿಸಿದ್ದು ಆ ಘಟನೆಯಿಂದಾಗಿ. ಹಿಂದಿನ ರಾತ್ರಿ ಹತ್ತು ಘಂಟೆಯ ಹಾಗೆ ತಮ್ಮ ಫ್ಲಾಟಿನ ಮೇಲಿನ ಮಹಡಿಯಿಂದ ಯಾರೋ ದೊಡ್ಡದಾಗಿ ಗಲಾಟೆಯನ್ನು ಮಾಡುತ್ತಿದ್ದರು. ಸುಮಾರು ಹೊತ್ತು ನೋಡಿದ ಸ್ಫೂರ್ತಿಗೆ ಸಿಟ್ಟು ನೆತ್ತಿಗೆ ಹತ್ತಿತ್ತು. ಅದನ್ನು ತಡೆದುಕೊಳ್ಳುವುದಕ್ಕೆ ಆಗದೇ ಅಪಾರ್ಟಮೆಂಟಿನ ವ್ಯಾಟ್ಸಆ್ಯಪ್ ಗ್ರೂಪಿನಲ್ಲಿ ಮೆಸೇಜ್ ಮಾಡಿದ್ದಳು. ಆದರೂ ಆ ಗಲಾಟೆ ಮಾತ್ರ ಏನೂ ಕಡಿಮೆಯಾಗಿರಲಿಲ್ಲ. ಹಠಕ್ಕೆ ಬಿದ್ದವರಂತೆ ಆಕಾಶ್ ಗೆ ಅವಳು ಮೇಲಿನ ಫ್ಲಾಟಿಗೆ ಹೋಗಿ ಬೈದು ಬರುವಂತೆ ಹೇಳಿದ್ದಳು. ಅವನು ಮಾತ್ರ ಕಡಿಮೆಯಾಗಬಹುದು ಬಿಡು ಎಂದು ಸುಮ್ಮನುಳಿದಿದ್ದ. ಏನೋ ರೊಚ್ಚಿಗೆದ್ದವಳಂತೆ ಆಕಾಶ್ ನನ್ನು ಮನಸೋಇಚ್ಛೆ ಬೈದಿದ್ದಳು. ಒಬ್ಬ ಗಂಡಾಗಿ ಈ ರೀತಿಯಲ್ಲಿ ಹೇಡಿಯಂತೆ ಇರುತ್ತೀಯಲ್ಲ. ನಾಚಿಕೆಯಾಗುವುದಿಲ್ಲವೇ ಎಂದು ಜರಿದಿದ್ದಳು. ಅವಳ ಮಾತಿನ ಆಘಾತಕ್ಕೆ ಹೆದರಿ ಹೀಕರಿಸಿಹೋದ. ಎಂದೂ ಅವಳ ಈ ತರದ ವರ್ತನೆಯನ್ನು ನೋಡಿರದ ಆಕಾಶ್ ಗೆ ಏನು ಹೇಳಬೇಕೆಂದು ತಿಳಿಯದೇ ಅವಳ ಸಮಾಧಾನಕ್ಕಾಗಿ ಮೇಲಿನ ಫ್ಲಾಟಿನವರಿಗೆ ಬೈದು ಬಂದಿದ್ದ.

ಗಂಡಸಾಗಿ ಎಂದು ಅರಿವಿಲ್ಲದೇ ಹೇಳಿದ್ದರ ಬಗ್ಗೆ ಸ್ಫೂರ್ತಿಗೆ ತಾನು ಹಾಗೆ ಹೇಳಬಾರದಿತ್ತು ಎಂದೆಲ್ಲ ಅನಿಸಿತ್ತು . ಅವರಿಬ್ಬರ ಸಲುಗೆಯ ಜೀವನದಲ್ಲಿ ಎಷ್ಟೋ ಸಲ ಗಂಡಸಾಗಿದ್ದರೆ ಎನ್ನುವುದನ್ನು ಹತ್ತಾರು ಸಲ ಹೇಳಿದ್ದಳು. ಈಗ ಸ್ಫೂರ್ತಿಯ ಆಫೀಸಿನ ರಜೆಯೂ ಮುಗಿದಿತ್ತು. ಮುಂಚಿನ ಸ್ಥಿತಿಗಿಂತ ಎಷ್ಟೋ ಸುಧಾರಿಸಿದಂತೆ ಕಾಣಿಸಿದ್ದು ಆಕಾಶ್ ಗೆ ಸಮಾಧಾನ ತಂದಿತ್ತು. ಅವರ ನಿತ್ಯದ ಕಾರ್ಯಗಳು, ಮಾತುಕತೆಗಳು ಯಥಾಪ್ರಕಾರವಾಗಿ ಸಾಗಿದ್ದವು. ಆದರೆ ಮಧ್ಯದಲ್ಲಿ ಅವಳ ಅರಿವಿನಲ್ಲಿಯೂ ಬಾರದಂತೆ ಸಿಟ್ಟು, ಆವೇಶ ಬಂದು ಹೋಗುತ್ತಿದ್ದು ಆ ಕ್ಷಣದಲ್ಲಿ ಆಕಾಶ್ ಕಾಣಿಸಿಯೂ ಕಾಣದಂತೆ ಮೌನವಾಗಿರುತ್ತಿದ್ದ. ಆಕಾಶ್ ಎಂದಿನಂತೆ ಅವಳಿಗೆ ಸಾಂತ್ವನದಿಂದ, ಪ್ರೀತಿಯಿಂದ ಮಾತುಗಳನ್ನು ಆಡುತ್ತ ಮನಸ್ಸಿಗೆ ಮುದವನ್ನು ನೀಡುವುದಕ್ಕೆ ಯತ್ನಿಸುತ್ತಿದ್ದ. ವಾರಾಂತ್ಯವೆಂದರೆ ಇಬ್ಬರಿಗೂ ತಮ್ಮ ಕಾಮನೆಗಳನ್ನು ಈಡೇರಿಸಿಕೊಳ್ಳುವ ಸಮಯ. ತಡರಾತ್ರಿ ಊಟ ಮಾಡುವುದು, ಇಷ್ಟದ ಫೀಲಂ ನೋಡುವುದು, ದಣಿವಿಲ್ಲದಿದ್ದರೆ ಸೆಕ್ಸ್ ಮಾಡಿ ದಣಿಯುವುದು ಇದೆಲ್ಲ ಎಷ್ಟೋ ವರುಷಗಳಿಂದ ಮಾಡಿಕೊಂಡಿದ್ದರು. ಅವತ್ತು ಶುಕ್ರವಾರ. ನೆಟ್ಫ್ಲಿಕ್ಸ್ ನಲ್ಲಿ ಯಾವುದೋ ಫೀಲಂನ್ನು ಆಕಾಶ್ ಟಿವಿಗೆ ಹಾಕಿಕೊಂಡು ಕುಳಿತಿದ್ದ. ಮೌನವಾಗಿ ಸ್ಫೂರ್ತಿಯೂ ಅದನ್ನು ನೋಡುತ್ತಿದ್ದಳು. ಅವಳ ಹತ್ತಿರಕ್ಕೆ ಹೋಗಿ ಮೈಗೆ ಒರಗಿ ಕುಳಿತ. ಅವಳದ್ದು ಅಂತಹ ಪ್ರತಿಕ್ರಿಯೆ ಇಲ್ಲದಿದ್ದರೂ ವಿರೋಧವೇನು ತೋರಿಸಲಿಲ್ಲ. ಯಾವುದೋ ಒಂದು ಸೀನ್ ನನ್ನು ನೋಡುತ್ತಲೇ ಆಕಾಶ್ ಉನ್ಮಾದನಾದ. ಚಡಪಡಿಸುತ್ತಲೇ ಅವಳ ಮುಖದ ಹತ್ತಿರಕ್ಕೆ ತನ್ನ ಮುಖವನ್ನು ಒಯ್ದು ಮುಖದಲ್ಲಿ ಸವರಿದ. ಆ ಸ್ಪರ್ಶಕ್ಕೆ ಅವಳು ಕಂಪಿಸಿದ್ದದ್ದು ಆಕಾಶ್ ತಿಳಿದು ಇನ್ನಷ್ಟು ಉದ್ರೇಕಗೊಂಡಿದ್ದ. ಕ್ಷಣದಲ್ಲಿಯೇ ಜಗತ್ತನ್ನು ಮರೆಯುವ ಶಕ್ತಿ ಆ ಇಬ್ಬರ ನೋಟದಲ್ಲಿತ್ತು ಒಂದಾಗಿಬಿಟ್ಟಿತು. ಎಷ್ಟೋ ದಿನದಿಂದ ಮಳೆಯ ನೀರಿಗೆ ಕಾಯುವ ಚಿಪ್ಪಿನಂತೆ ಇಬ್ಬರೂ ಮಿಲನ ಸುಖದಲ್ಲಿ ಬೇಯ್ದರು. ಕಾಮದ ತುತ್ತದ ತುದಿಯಲ್ಲಿ ಸೇರಿದರು. ಸಂತೃಪ್ತಿಯ ಅವರ ಮುಖದಲ್ಲಿ ಕಾಣಿಸಿತು. ಕೆಲವೇ ಕ್ಷಣಗಳಲ್ಲಿ ರಸನಿಮಿಷದಲ್ಲಿ ಒಯ್ದೆಯಾದರು. ಯಾಕೋ ಸ್ಫೂರ್ತಿ ತನ್ನ ದೇಹಕ್ಕೆ ಅಂಟಿದ್ದ ವೀರ್ಯವನ್ನು ಮತ್ತೆ ಮತ್ತೆ ನೋಡಿದಳು. ಅದು ಪ್ರಯೋಜನವಿಲ್ಲದ್ದು ಎಂದು ಎಣಿಸಿಕೊಳ್ಳುವಾಗ ಆಕಾಶ್ ಬಗ್ಗೆ ಕುದ್ದುಹೋಗಿದ್ದಳು. ಅಸಹನೆಯಲ್ಲಿ ಆಕಾಶ್ ಮುಂಚದಿಂದ ದೂಡಿ ಹೊರಬಂದಿದ್ದಳು.

ಆಕಾಶ್ ಸ್ಫೂರ್ತಿ ಈ ಸಮಸ್ಯೆಗಳಿಂದ ಬಿಡಿಸಿಕೊಳ್ಳುವುದಕ್ಕೆ ನಿರಂತರವಾಗಿ ವಿನುತಾಳ ಬಳಿಯಲ್ಲಿ ಮಾತನ್ನಾಡುತ್ತಲೇ ಇದ್ದಿದ್ದಳು. ವಿನುತಾ ಗೆ ಸ್ಫೂರ್ತಿಯ ದ್ವಂದ್ವಗಳು ಇನ್ನಷ್ಟು ಅರ್ಥವಾದ ಮೇಲೆ ಆಕಾಶ್ ಮೂಲಕವಲ್ಲದಿದ್ದರೂ ಚಿಕಿತ್ಸೆಯ ಮೂಲಕ ಮಗುವನ್ನು ಹೊಂದುವ ಬಗ್ಗೆ ಮಾತುಗಳನ್ನು ಆಡಿದ್ದಾಗ ಮತ್ತೆ ಅವಳಿಗೆ ಬಯಕೆ ಚಿಗುರಿತ್ತು. ವಿನುತಾ ಮಾಡಬಹುದಾದ ವಿಧಾನದ ಬಗ್ಗೆ ಸವಿಸ್ತಾರವಾಗಿ ಅವಳಿಗೆ ತಿಳಿಸಿದ್ದಳು. ಸ್ಪರ್ಮ ಬ್ಯಾಂಕ್ ಗಳಲ್ಲಿರುವ ಸ್ಪರ್ಮ ಡೊನರ್ಸ್ ಗಳಿಂದ ಸಂಗ್ರಹಿಸಿರುವ ಉತ್ತಮ ಗುಣಮಟ್ಟದ ವೀರ್ಯವನ್ನು ಪಡೆದು ಐಎಮೆಸ್ಐ ವಿಧಾನದಲ್ಲಿ ಅಂಡಾಣುವಿಗೆ ಇಂಜೆಕ್ಟ್ ಮಾಡುವ ಚಿಕಿತ್ಸೆಯ ಮೂಲಕವಾಗಿ ಬೇರೆ ಸಂಪರ್ಕವಿಲ್ಲದೆಯೂ ಮಗುವನ್ನು ಪಡೆಯಬಹುದು ಎಂದಿದ್ದಳು. ಆದರೆ ಮೇಲ್ನೋಟಕ್ಕೆ ಸ್ಫೂರ್ತಿಗೆ ಇದು ಒಪ್ಪಿಗೆಯಾದಂತೆ ಅಂದುಕೊಂಡಿದ್ದರೂ ಅದರ ಆಳಕ್ಕೆ ಇಳಿದಂತೆ ಭಿನ್ನವಾದ ವಿಚಾರಗಳು ಹರವಿಕೊಂಡು ಇನ್ನಷ್ಟು ಗೊಂದಲವನ್ನು ಉಂಟುಮಾಡಿತ್ತು.

ಸ್ಫೂರ್ತಿಗೆ ಅನಾಮಿಕ, ಅಜ್ಞಾತವಾಗಿರುವ ವ್ಯಕ್ತಿಯಿಂದ ಸಂಪರ್ಕವಿಲ್ಲದೆ ವೀರ್ಯವನ್ನು ತನ್ನ ಬಸಿರಿನಲ್ಲಿ ತುಂಬಿಕೊಳ್ಳುವ ವಿಚಾರ ತಾನು ಒಪ್ಪಿಕೊಳ್ಳಲಾಗದ ವಿಚಾರವೆಂದು ಅನ್ನಿಸಿರಲಿಲ್ಲ. ಆದರೆ ಆಕಾಶ್ ತನ್ನಿಂದ ಮಗುವನ್ನು ಪಡೆಯುವುದಕ್ಕೆ ಸಾಧ್ಯವಿಲ್ಲ ಎಂಬುದನ್ನು ಹೇಗೆ ಒಪ್ಪಿಕೊಳ್ಳುತ್ತಾನೆ ಎಂಬ ಸಂದಿಗ್ಧತೆ ಅವಳನ್ನು ಆ ಕ್ಷಣದಲ್ಲಿ ಕಾಡಿತ್ತು. ಈ ಪ್ರಪಂಚದಲ್ಲಿ ಯಾವ ಪುರುಷ ಜೀವಿಯೂ ಕೂಡ ತನ್ನಿಂದ ಸಂತಾನದ ಶಕ್ತಿಯಿಲ್ಲ ಎಂಬುದನ್ನು ಬಹಿರಂಗವಾಗಿ ಒಪ್ಪಿಕೊಳ್ಳಲಾರ. ಯಾವಾಗಲೂ ತನ್ನಿಂದಲೇ ಆಗಿದ್ದು ಎಂಬ ಅಜ್ಞಾತ ಅಭಿಮಾನ ಅವನ ಎದೆಯೊಳಗೆ ಕಾಡುತ್ತಿರುವುದಕ್ಕೆ ಬಯಸುತ್ತಾನೆ. ಹಾಗಿದ್ದಾಗ ಆಕಾಶ್ ಸ್ಪರ್ಮ ಡೊನರ್ಸ್ ಮೂಲಕವಾಗಿ ಗರ್ಭವನ್ನು ಧರಿಸಿ, ಯಾರೋ ಸಂಬಂಧವಿಲ್ಲದ ವ್ಯಕ್ತಿಯಿಂದ ಪಡೆದ ಸಂತಾನಕ್ಕೆ ತಾನು ಅಪ್ಪನೆಂದು ಕರೆಯಿಸಿಕೊಳ್ಳುವುದನ್ನು ಆತ್ಮಸಂತೋಷದಿಂದ, ಮುಕ್ತವಾಗಿ ಸ್ವೀಕರಿಸುವುದಕ್ಕೆ ಸಾಧ್ಯವೇ ಎನ್ನುವ ಬಲವಾದ ಪ್ರಶ್ನೆ ಎದುರಾಗಿತ್ತು.ಯಾವುದೋ ಒಂದು ಸಂದರ್ಭದಲ್ಲಿ ದತ್ತು ಮಕ್ಕಳನ್ನು ನಮ್ಮದೆಂದು ಒಪ್ಪಿಕೊಳ್ಳುವುದಕ್ಕೆ ನಮ್ಮ ಮನಸ್ಥಿತಿ

ಗಟ್ಟಿಯಾಗಿರಬೇಕೆಂದು ಹಲವು ಬಾರಿ ಯಾರೋ ಸ್ನೇಹಿತರೊಬ್ಬರು ಮಗುವೊಂದನ್ನು ದತ್ತು ಪಡೆದಿರುವುದಕ್ಕೆ ತಿಳಿಸಿದ್ದು ಅವಳಿಗೆ ನೆನಪಿಗೆ ಬಂದಿತ್ತು. ಅದೇ ಧೋರಣೆ ಇಲ್ಲಿಯೂ ಗಟ್ಟಿಯಾಗಿದ್ದರೆ ಇದನ್ನು ಅವನು ಸ್ವೀಕರಿಸುವುದಿಲ್ಲವೆಂಬುದು ಸ್ಫೂರ್ತಿಗೆ ಖಾತ್ರಿಯಾಗಿತ್ತು. ಇದರ ಜೊತೆಗೆ ಎಲ್ಲಕ್ಕಿಂತ ಹೆಚ್ಚಾಗಿ ಅವರ ಜೊತೆಗೆ ಮಗುವನ್ನು ಅಪೇಕ್ಷಿಸುತ್ತಿರುವ ತಂದೆ ತಾಯಿಗಳು ಇದಕ್ಕೆಲ್ಲ ಹೇಗೆ ಹೇಳಬಹುದು ಎಂಬ ಯೋಚನೆಯೂ ಬಂದಿತ್ತು. ಮನೆತನ, ಜಾತಿ, ಧರ್ಮ ಸಂಪ್ರದಾಯಸ್ಥ ಎಂಬೆಲ್ಲ ಗಟ್ಟಿ ಧೋರಣೆಯಲ್ಲಿ ಬಂದವರಿಗೆ, ಹೊಸ ಜೀವವನ್ನು ಅಷ್ಟು ಸುಲಭವಾಗಿ ತಮ್ಮ ವಂಶವಾಹಿನಿ ಬಳ್ಳಿಯಲ್ಲಿ ಸೇರಿಸಿಕೊಳ್ಳಬಹುದಾಗಿರುವಷ್ಟು ಅದು ಸರಳವಾಗಿರುವಂತೆಯೂ ಕಾಣಿಸಿರಲಿಲ್ಲ. ಈ ವಿಚಾರದಲ್ಲಿ ದೊಡ್ಡ ಪ್ರತಿರೋಧ ಬರಬಹುದು ಎಂದುಕೊಂಡಳು. ಬಹುಕಾಲದಿಂದಲೂ ಅನೈತಿಕ ಸಂಬಂಧದ ಮಕ್ಕಳನ್ನು ಓರೆಗಣ್ಣಿನಿಂದ ನೋಡಿ, ಅವುಗಳ ಬಗ್ಗೆ ತತ್ಸಾರದ ಧೋರಣೆಯನ್ನು ಹೊಂದಿ, ಬಹಿರಂಗವಾಗಿ ಯಾವತ್ತೂ ಒಪ್ಪಿಕೊಳ್ಳದ ಸಮಾಜ, ಈ ರೀತಿಯಲ್ಲಿ ಮಗುವನ್ನು ಪಡೆದರೆ ಅದಕ್ಕೆ ಯಾವ ಮಾತುಗಳು ಬರಬಹುದು ಎಂಬ ಪ್ರಶ್ನೆಯೂ ಬಂದಿತ್ತು. ಹಾಗಾದರೆ ಇದು ಕೂಡ ಅನೈತಿಕವಾಗುವುದೇ ಎಂಬ ಪ್ರಶ್ನೆಗೆ ಅವಳಿಗೆ ಉತ್ತರ ಸಿಕ್ಕರಲಿಲ್ಲ. ಬಾಲ್ಯದಿಂದಲೂ ಕೇಳಿದ ಅನೈತಿಕ ಘಟನೆಗಳೆಲ್ಲ ಒಂದೊಂದಾಗಿ ಮುನ್ನಲೆಗೆ ಬಂದಾಗ ಆ ಸ್ಥಿತಿಯನ್ನು ಎಣಿಸಿಕೊಳ್ಳುವಾಗ ಮನಸ್ಸು ಕಂಪಿಸುತ್ತಿತ್ತು . ಸ್ಫೂರ್ತಿಗೆ ಈ ವಿಚಾರದ ಬಗ್ಗೆ ಹೆಚ್ಚು ಯೋಚಿಸುತ್ತ ಹೋದಂತೆ ವಿಚಾರದ ಬಗ್ಗೆ ಇನ್ನಷ್ಟು ಸ್ಪಷ್ಟತೆ ಸಿಕ್ಕಿತ್ತು. ಯಾರಲ್ಲಿಯೋ ಹೇಳಿ ಕೇಳಿ ಚರ್ಚಿಸಿ ಇದರ ಬಗ್ಗೆ ನಿರ್ಣಯಿಸಿದರೆ ಅದು ದಾರಿ ತಪ್ಪುವುದು ಖಂಡಿತವೆಂದು ತೋರಿ, ಎಲ್ಲರನ್ನು ಒಂದೇ ನಿರ್ಧಾರಕ್ಕೆ ಅಣಿಗೊಳಿಸುವುದು ತನ್ನಿಂದ ಅಸಾಧ್ಯವೆಂಬುದು ತಿಳಿದು, ತಾನೊಬ್ಬಳೇ ಒಂದು ನಿರ್ಣಯಕ್ಕೆ ಬರುವುದಕ್ಕೆ ಯೋಚಿಸಿದ್ದಳು.

ಸ್ಫೂರ್ತಿಗೆ ಹಿಂದಿನ ರಾತ್ರಿಯೆಲ್ಲ ನಿದ್ದೆ ಇರದೆ ಬೆಳಗ್ಗೆ ಎದ್ದಾಗಲೂ ಕಣ್ಣುಗಳು ನೋಯುತ್ತಿದ್ದವು. ಜೊತೆಗೆ ಮಾನಸಿಕವಾದ ಯಾವುದೋ ಒತ್ತಡ, ಬೇಗುದಿ ಅವಳ ಮೊಗದಲ್ಲಿ ಗೆರೆಗಳಾಗಿ ತೋರುತ್ತಿರುವಂತಿತ್ತು. ಅಂದು ಶನಿವಾರವಾಗಿದ್ದರೂ ಆಫೀಸಿಗೆ ಹೋಗುವ ತರಾತುರಿಯಲ್ಲಿದ್ದಳು. ಕಳೆದೆರಡು ತಿಂಗಳಿನಿಂದ ಕಸ್ಟಮರ್ ಗೆ ಪ್ರೊಡಕ್ಟ್ ಡಿಲಿವರಿ ಮಾಡಿಕೊಡಬೇಕೆಂದಿದ್ದರಿಂದ ವಿಪರೀತವಾದ ಕಾರ್ಯದೊತ್ತಡ ಎಂದು ಹೇಳಿಕೊಳ್ಳುತ್ತಿದ್ದಳು. ತನ್ನ ಕೆಳಗೆ ಇರುವ ಉದ್ಯೋಗಿಗಳು ಆಫೀಸಿಗೆ ಕೆಲಸಕ್ಕೆ ಬರುತ್ತಿದ್ದರಿಂದ ಅವಳು ಕೂಡ ಹೋಗಬೇಕಾಗಿತ್ತು. ಆಕಾಶ ಇನ್ನೂ ನಿದ್ರಿಸುತ್ತಲೇ ಇದ್ದಿದ್ದ. ಬಹುಶಃ ಬೆಳಗಿನ ಜಾವದಲ್ಲಿ ಅವನಿಗೆ ನಿದ್ದೆ ಹತ್ತಿರಬೇಕು. ಪಾಪ, ಎಷ್ಟು ನೊಂದುಕೊಂಡಿರಬೇಕು ಆತ. ಬಹುಶಃ ತನ್ನ ಜಾಗದಲ್ಲಿ ಇದ್ದಿದ್ದರೆ ಅವನು ಯಾವ ರೀತಿಯಲ್ಲಿ ಯೋಚಿಸುತ್ತಿದ್ದ ಎಂದು ಸ್ಫೂರ್ತಿ ಅವನಲ್ಲಿ ಕೇಳಬೇಕಿತ್ತು ಎಂದುಕೊಂಡಿದ್ದಳು.

ಸ್ಫೂರ್ತಿ ಬೆಳಗ್ಗಿನ ತಿಂಡಿ, ಮಧ್ಯಾಹ್ನದ ಊಟ ಎಲ್ಲವನ್ನು ಸಿದ್ಧ ಮಾಡಿಟ್ಟಿರುವಾಗ ಆಕಾಶ್ ಎದ್ದು ಬಂದು ಸೋಫದಲ್ಲಿ ಕುಳಿತಿದ್ದ. ಅವಳು ಆಫೀಸಿಗೆ ಹೋಗುತ್ತಿರುವುದನ್ನು ಕೇಳಿ , ಕೋಪಗೊಳ್ಳುತ್ತಲೇ ನುಡಿದಿದ್ದ


"ಇವತ್ತು ಯಾಕೆ ಆಫೀಸಿಗೆ ಹೋಗುತ್ತೀಯಾ. ಇವತ್ತು ಶನಿವಾರ"


"ನಿನ್ನ ಆಫೀಸ್ ತರ ಅಲ್ಲ ನನ್ನ ಆಫೀಸ್. ನಾವು ಈ ಪ್ರೋಜೆಕ್ಟ್ ಮುಗಿಸಲೇಬೇಕು. ಎಲ್ಲರೂ ಬರುತ್ತಾರೆ. ನಾನು ಹೋಗಬೇಕು"

"ಸುಮ್ನೆ ಯಾಕ್ ಸ್ಟ್ರೆಸ್ ಮಾಡಿಕೊಳ್ಳುತ್ತಿಯಾ. ಈ ತರ ಆಫೀಸ್ ಆಫೀಸ್ ಅಂತ ಹೋದ್ರೆ ಮಗುವಾಗುತ್ತಾ? ಡಾಕ್ಟರ್ ಹೇಳಿದ್ದನ್ನು ಸ್ವಲ್ಪವಾದರೂ ಕೇಳು"

ಸ್ಫೂರ್ತಿ ಮತ್ತೇನೋ ಮಾತನ್ನಾಡುವುದಕ್ಕೆ ಬಾಯನ್ನು ತೆರೆದಿದ್ದಳಾದರೂ ಅದು ಗಂಟಲಿನಲ್ಲಿಯೇ ಉಳಿಯಿತು. ಇನ್ನು ಮಾತನ್ನಾಡಿದರೆ ಅದು ಎಲ್ಲಿಗೋ ಹೋಗಿ ನಿಲ್ಲುತ್ತದೆ ಎಂದು ಗ್ರಹಿಸಿ ಆಕಾಶ್ ಎದೆಯನ್ನು ಸವರುತ್ತಾ "ಇಲ್ಲ ಚಿನ್ನು, ಇನ್ಮುಂದೆ ಸ್ಟ್ರೆಸ್ ಮಾಡಿಕೊಳ್ಳುವುದಿಲ್ಲ. ಈ ಪ್ರೊಜೆಕ್ಟ್ ದೇವರ ದಯೆಯಿಂದ ಮುಗಿದರೆ, ಇನ್ಮೇಲೇ ನಾನು ಕೆಲಸ ಮಾಡಬಾರದು ಅಂತ ತೀರ್ಮಾನ ಮಾಡಿದೀನಿ. ಮುಂದಿನ ತಿಂಗಳಿನಿಂದ ಮನೆಯಲ್ಲಿಯೇ ಇದ್ದು ಬಿಡ್ತಿನಿ. ಖುಷಿನಾ ಈಗಾ?" ಎಂದು ಆಕಾಶ್ ಕಣ್ಣಿಲ್ಲಿ ಕಣ್ಣನ್ನಿಟ್ಟು ನೋಡುತ್ತಾ ಹೇಳಿದಳು. ಅವಳ ಮಾತಿನ ಇಂಪಿಗೆ ಆಕಾಶನ ಕೋಪವೆಲ್ಲ ಇಳಿದುಹೋಗಿ, ಎಷ್ಟೋ ದಿನಗಳಿಂದ ಬಯಸಿದವನಂತೆ ತಲೆಯಾಡಿಸುತ್ತ, ಮುಗುಳು ನಕ್ಕು , ಪ್ರೀತಿಯಿಂದ ಬಿಗಿದಪ್ಪಿ ಅವಳನ್ನು ಮನೆಯಿಂದ ಕಳುಹಿಸಿಕೊಟ್ಟಿದ್ದ. ಸ್ಫೂರ್ತಿ ಮಾತ್ರ ಮುಂದಾಗುವುದೆಲ್ಲ ಕಣ್ಣ ಮುಂದೆ ಬರುತ್ತಿರುವಾಗ ಅರಿವಿಲ್ಲದಂತೆ ಬೆವತಿದ್ದಳು.

# ಕವನ ಸಂಕಲನ





**ಡಾ.ಸುಧಾ.ವಿ.ಆರ್**
ಹಾಸನ

# ಲಾಜವಂತಿ

ಅವಳು ಒಂದೆರಡು ಹೆಜ್ಜೆ
ಹಿಂದೆ ಸರಿಸಿದರೆ
ಶರ್ಮಿಳೆ
ಮುನ್ನಡೆದರೆ
ಜಂಬಗಾತಿ
ಸಹಿಸಲಾರರು ಮಂದಿ

ಅವಳ ಸಲಹೆ ಉಪಯುಕ್ತ
ಎಂದವರೇ,ತಿರುಗಿ ಬಿದ್ದು
ವಾಚಾಳಿ ಎನ್ನುವರು
ನಿರ್ಲಿಪ್ತತೆಯ ಉದಾಸ ಭಾವ
ಕಡು ಮೌನವೆಂದು ಗ್ರಹಿಸುವರು
ಕನಸು ಕಂಗಳ
ನೋಡಿ
ಹಗಲುಗನಸು
ಕಾಣುವಳೆನ್ನುವರು

ಕಾನನದಿ ಏಕಾಂತ ಬಯಸಿ
ಬಂದವಳಿಗೆ,,,,ತರು,ಲತೆಗಳ
ಬಳಿ ಸಾರಿ ಬೀಸುವ
ಮಂದ ಮಾರುತದ
ಪಿಸು ಮಾತಿಗೆ
ಮಾರ್ನುಡಿಯುವಾಸೆ

ಮಧ್ಯಮ ಸ್ಥಿತಿಯ ಆಕೆ
ವಾಚಾಳಿಯಲ್ಲ- ಮೃದುಲಾಳು ಅಲ್ಲ
ಸಬಲಳಲ್ಲ- ದುರ್ಬಲಳಲ್ಲ
ತುಸು ಲಜ್ಜೆಯುಳ್ಳವಳು

ಕಾಡಿನ ಮರಗಳ ಬಳಿ
ನಡೆದವಳಿಗೆ
ಮರ ಏನೋ ನುಡಿಯುವಂತೆ
ಭಾಸವಾಗಿ
ಅಲ್ಲಿಯೇ ವಿರಮಿಸಿದವಳಿಗೆ
,ಪರಿಸರ ಅಪ್ಯಾಯಮಾನ
ಎನಿಸಿ,ಸಮಾಧಾನದ
ಉಸಿರು ಹೊರಚೆಲ್ಲಿದಳು.



**ರಶ್ಮಿ ಆರುಂಡಿ**
ನ್ಯೂ ಜೆರ್ಸಿ

# ಸೌರಮಂಡಲ

**ಸೌ**ರಮಂಡಲದಲ್ಲಿ ಇರುವುದು
ಎಂಟು ಗ್ರಹಗಳು ನೋಡಿ ನೀವು,
ಮೊದಲನೇ ಗ್ರಹ ಬುಧ ಗ್ರಹವು ,
ಅದರ ಓಟವು ತೀವ್ರವು..

ಎರಡನೇ ಗ್ರಹ ಶುಕ್ರ ಗ್ರಹವು,
ಭೂ ತಾಯಿಯ ಗಾತ್ರ ಹೊಂದಿ ,
ಅತೀ ಉಷ್ಣತೆಯನ್ನು ಬಿಟ್ಟು ,
ವಕ್ರ ಗತಿಯಲಿ ಸುತ್ತುವುದು

ಮೂರನೇ ಗ್ರಹ ನಮ್ಮ ಭೂಮಿ,
ಇವಳು ಜೀವದ ತಾಣವು,
ನೀರು ಗಾಳಿ ಬೆಳಕು ಕೊಡುವ
ನಮ್ಮ ನಲ್ಮೆಯ ತಾಯಿಯು

ನಾಲ್ಕನೇ ಗ್ರಹ ಮಂಗಳ ಗ್ರಹ,
ಶೀಘ್ರದಲ್ಲೇ ಭೇಟಿ ನೀಡಲು
ಯೋಜಿಸಿರುವ ಈ ಗ್ರಹವು
ಕೆಂಪು ಕೆಂಪಾಗಿರುವುದು..

ಐದನೇ ಗ್ರಹ ಗುರು ಗ್ರಹವು,
ಎಲ್ಲಾ ಗ್ರಹಗಳಿಗಿಂತ ದೊಡ್ಡದು,
ಸೌರ ವ್ಯೂಹ ದಲ್ಲಿ ಮೊದಲು
ರಚನೆಗೊಂಡ ಗ್ರಹವಿದು...

ಆರನೇ ಗ್ರಹ ಶನಿ ಗ್ರಹವು,
ಉಂಗುರು ಹೊಂದು, ಸುಂದರ ಕಾಣ್ವುದು..
ಏಳನೇ ಗ್ರಹ uranusu
sidu sidu ಸುತ್ತುವುದು..

ಕೊನೇ ಗ್ರಹ Neptunu ಎಂದು
ಮಂಜುಗಡ್ಡೆ ದೈತ್ಯ ಇದುವು
ಇವುಗಳೇ ನಮ್ಮ ಸೌರವ್ಯೂಹದ
ಗ್ರಹಗಳ ಸಂಗತಿಗಳು

ಇವುಗಳೇ ನಮ್ಮ ಸೌರವ್ಯೂಹದ
ಗ್ರಹಗಳ ಸಂಗತಿಗಳು



**ಎಂ.ವಿ. ಶಶಿಭೂಷಣ ರಾಜು**
ಅಮೇರಿಕ

# ನಾನು ಹೆಣ್ಣಾಗಬಾರದಿತ್ತೇ?

**ಆ**ಳ ಗರ್ಭದಲ್ಲಿ ಬೆಂಕಿ ನರ್ತಿಸುತ್ತಿದ್ದರೂ
ಮಮತೆ ಒಸರುತ್ತದೆ ಕಣ್ಣಿನಲಿ
ಬೆಂಕಿಧಾರಿ ಹನಿ, ಮಾರ್ಗದಲ್ಲಿ
ತಂಪೆರೆಯುತ್ತದೆ

ಹತ್ತಾರು ಕೈಗಳಲಿ, ಸಾವಿರ ಕಣ್ಣಕಾವಿಲಿನಲಿ
ತನ್ನಿರುವ ಮರೆತು
ಭುವಿ ಗಗನವ ಹೊಲಿದು, ಒಂದು ಗೂಡಿಸುವ ತವಕ
ಸೃಷ್ಟಿಕಾರ್ಯದಲಿ, ಮುದವಿರಿಸಿ
ಮುಂಬೆಳಕ ದಾರಿ ಹಾಸಿ, ಭವಿಷ್ಯ ಬೆಳಗುವ ಪುಳಕ
ಸಾಗರ ದಾಹಕೆ ನದಿಯಾಗುವುದು

ನೋವ ಸೆರಗಲಿ ಸುತ್ತಿ ಬಿಗಿದು
ಮೌನವ ನುಂಗಿ ಕತ್ತಲಲಿ
ಬೆಳಕದೀಪವ ಹಚ್ಚಿ
ಮನ, ಮನೆ ಬೆಳಗಿ
ವಿಶ್ವಕೆ ಉಸಿರಾಗಿ
ಹಸಿರು ಚೆಲ್ಲುವುದು

ಅಷ್ಟೂ ಮನಸಿನಲಿ
ಜ್ವಾಲಾಮುಖಿಯೊಂದನು
ಅದುಮಿಟ್ಟುಕೊಂಡು
ಕಂಗಳಲಿ ಪ್ರೇಮಚೆಲ್ಲುವುದು

ಆಸೆಗಳೆಷ್ಟೋ ಮನದಲಿ ಮೂಡಿದರೂ
ನದಿಯ ಏರಿಳಿತದೊಳಗಿನ ಭಾವದಂತೆ
ಸಾಗರದೆಡೆ ಸರಿಯುವುದು

ಸೃಷ್ಟಿ ಹೊರೆಯ ಹೊತ್ತು
ಕತ್ತಲೆಲ್ಲಾ ಆಪೋಶನ ತೆಗೆದುಕೊಂಡು
ವಿಶ್ವಕ್ಕೇ ಬೆಳಕಚೆಲ್ಲಿ
ಪುರುಷ ಕಡೆದು ಬೀಳಿಸಿದ
ನೆನಪ ಮತ್ತೆ ಮತ್ತೆ ಕಟ್ಟುವುದು
ಉಸಿರುಗಟ್ಟಿಹ ಜಗಕೆ ಉಸಿರ ಊದಿ
ಮತ್ತೆ ಮತ್ತೆ ಜೀವ ತುಂಬುವುದು

ಎಲ್ಲೆಡೆ ಸೌಂದರ್ಯ ಚೆಲ್ಲಿ
ಮನಸುಗಳ ಬೆಸೆದು
ತುಸು ಬಿಸಿ ಕಾವ ಜಗಕೆ ಕೊಟ್ಟು
ಆರೈಸಿ ಹರಸುವುದು
ಆಳದೊಳಡಗಿರುವ ಕಾವು
ಭುವಿಯ ಒಳಗಡೆ ಕುಳಿತ ಲಾವಾದಂತೆ
ಕೆರಳದೆ ನಿಡಿಸುಯ್ಯುತ್ತದೆ

ಅವಳ ಮನಸು ಆಳ ಶರಧಿ,
ಸಣ್ಣ ಅಲೆಗಳಲಿ ಎಲ್ಲ ತೋರಿಸುವಂತೆ
ನಡೆದರೂ ಗರ್ಭದಲಿ ಸಿರಿರತ್ನಗಳು
ಎಷ್ಟೆಲ್ಲಾ ತರಂಗಳೆದ್ದರೂ
ಮನಸ ತೆರೆಯದೆ, ಹೋರಾಡುವ
ನೋವ ತಿಳಿಯಲು
ನಾನು ಹೆಣ್ಣಾಗಬಾರದಿತ್ತೇ?


ಚಳಿಗೆ ಅರಸವ



**ವರಲಕ್ಷ್ಮಿ ಶಶಿಧರ್**
ನ್ಯೂ ಜೆರ್ಸಿ





ಅಕ್ಕಿ ಹಿಟ್ಟಿನ ಬಿಳಿ ಹೋಳಿಗೆ ಮತ್ತು ಕ್ಯಾಪ್ಸಿಕಂ ಕರ್ರಿ – ವಿಸ್ತೃತ ರೆಸಿಪಿ

ದಕ್ಷಿಣ ಭಾರತದ ಕೆಲವು ಭಾಗಗಳಲ್ಲಿ ಬಿಳಿ ಹೋಳಿಗೆ ಬಹಳ ಪ್ರಸಿದ್ಧ. ಇದು ಗೋಧಿ ಹಿಟ್ಟಿಲ್ಲದೆ, ಪೂರ್ತಿ ಅಕ್ಕಿ ಹಿಟ್ಟಿನಿಂದ ತಯಾರಾಗುವುದರಿಂದ ತುಂಬಾ ಮೆತ್ತಗೆ, ಬಿಳಿಯಾಗಿ, ತಿನ್ನಲು ಲಘುವಾಗಿರುತ್ತದೆ. ಸಾಮಾನ್ಯವಾಗಿ ಇದನ್ನು ಸವಿರುಚಿಯ ತರಕಾರಿಗಳೊಂದಿಗೆ ಸವಿಯುತ್ತಾರೆ. ಇಲ್ಲಿ ಅದಕ್ಕೆ ಜೊತೆಯಾಗಿ ಸುವಾಸನೆಯ ಕ್ಯಾಪ್ಸಿಕಂ ಕರ್ರಿಯ ಹಂತ-ಹಂತದ ವಿವರ.

1. **ಬಿಳಿ ಹೋಳಿಗೆ (Rice Flour Holige)**

ಬೇಕಾಗುವ ಸಾಮಗ್ರಿಗಳು:
- ಅಕ್ಕಿ ಹಿಟ್ಟು – 2 ಕಪ್
- ಉಪ್ಪು – ರುಚಿಗೆ
- ಬಿಸಿ ನೀರು – ಅಗತ್ಯದಷ್ಟು
- ಎಣ್ಣೆ – 2 ಟೀ ಸ್ಪೂನ್
- ತುಪ್ಪ – ಇಚ್ಛೆ ಅನುಸಾರ

ಮಾಡುವ ವಿಧಾನ:
ಮೊದಲು ಒಂದು ದೊಡ್ಡ ಬೌಲ್ ತೆಗೆದುಕೊಂಡು ಅಕ್ಕಿ ಹಿಟ್ಟು ಮತ್ತು ಉಪ್ಪು ಸೇರಿಸಿ. ಬಿಸಿ ನೀರನ್ನು ನಿಧಾನವಾಗಿ ಹಾಕುತ್ತಾ ಮೃದುವಾದ ಹಿಟ್ಟನ್ನು ತಯಾರಿಸಬೇಕು. ಬಳಿಕ ಎಣ್ಣೆ ಸೇರಿಸಿ ಚೆನ್ನಾಗಿ ಮಿದ್ದು, 10–15 ನಿಮಿಷ ಮುಚ್ಚಿ ಇಡಬೇಕು. ನಂತರ ಹಿಟ್ಟನ್ನು ನಿಂಬೆ ಗಾತ್ರಕ್ಕೆ ಉಂಡೆ ಮಾಡಿ, ಬಾಳೆ ಎಲೆ ಅಥವಾ ಶೀಟ್ ಮೇಲೆ ಕೈಯಿಂದ ಚಪ್ಪಟೆ ಮಾಡಬೇಕು. ಬಿಸಿ ತವೆಯಲ್ಲಿ ಎರಡೂ ಬದಿಯೂ ಹೋಳಿಗೆಯಂತೆ ಬೇಯಿಸಿ. ಬಿಳಿ ಮತ್ತು ಮೆತ್ತಗೆ ಬರುವುದು ಮುಖ್ಯ.



2. **ಕ್ಯಾಪ್ಸಿಕಂ ಕರ್ರಿ (Capsicum Curry)**


ಬೇಕಾಗುವ ಸಾಮಗ್ರಿಗಳು:
- ಕ್ಯಾಪ್ಸಿಕಂ – 2
- ಈರುಳ್ಳಿ – 1
- ಟೊಮ್ಯಾಟೋ – 1
- ಹಸಿಮೆಣಸು – 2
- ಶುಂಠಿ–ಬೆಳ್ಳುಳ್ಳಿ ಪೇಸ್ಟ್ – 1 ಟೀ ಸ್ಪೂನ್
- ಅರಿಶಿನ – ¼ ಟೀ ಸ್ಪೂನ್
- ಕೆಂಪು ಮೆಣಸಿನ ಪುಡಿ – 1 ಟೀ ಸ್ಪೂನ್
- ಧನಿಯಾ ಪುಡಿ– 1 ಟೀ ಸ್ಪೂನ್
- ಜೀರಿಗೆ ಪುಡಿ – ½ ಟೀ ಸ್ಪೂನ್
- ಕೊತ್ತಂಬರಿ
- ಕೊಬ್ಬರಿ – 2–3 ಟೇಬಲ್ ಸ್ಪೂನ್
- ಎಣ್ಣೆ – 2 ಟೇಬಲ್ ಸ್ಪೂನ್
- ಉಪ್ಪು – ರುಚಿಗೆ

ಕ್ಯಾಪ್ಸಿಕಂ ಕರ್ರಿ ಮಾಡುವ ವಿಧಾನ:
ಪ್ಯಾನ್‌ನಲ್ಲಿ ಎಣ್ಣೆ ಬಿಸಿ ಮಾಡಿ ಈರುಳ್ಳಿ ಹುರಿಯಬೇಕು. ನಂತರ ಹಸಿಮೆಣಸು ಮತ್ತು ಶುಂಠಿ–ಬೆಳ್ಳುಳ್ಳಿ ಪೇಸ್ಟ್ ಸೇರಿಸಿ ಹಸಿ ವಾಸನೆ ಹೋಗುವವರೆಗು ಹುರಿಯಬೇಕು. ಕ್ಯಾಪ್ಸಿಕಂ ಹಾಕಿ 3–4 ನಿಮಿಷ ಹುರಿದ ನಂತರ ಟೊಮ್ಯಾಟೋ ಸೇರಿಸಿ ಬೇಯಿಸಬೇಕು. ನಂತರ ಅರಿಶಿನ, ಕೆಂಪು ಮೆಣಸಿನ ಪುಡಿ , ಧನಿಯಾ ಪುಡಿ, ಜೀರಿಗೆ ಪುಡಿ, ಉಪ್ಪು ಸೇರಿಸಿ, ಕೊಬ್ಬರಿ ಪೇಸ್ಟ್ ಹಾಕಿ ½–1 ಕಪ್ ನೀರು ಸೇರಿಸಿ 5–7 ನಿಮಿಷ ಕುದಿಸಬೇಕು. ಕೊನೆಯಲ್ಲಿ ಕೊತ್ತಂಬರಿ ಸೊಪ್ಪು ಸೇರಿಸಬೇಕು.

ಸೇವಿಸುವ ವಿಧಾನ:
ಬಿಸಿ ಬಿಸಿ ಬಿಳಿ ಹೋಳಿಗೆಯ ಜೊತೆ ಗಾಢ, ಸುಗಂಧದ ಕ್ಯಾಪ್ಸಿಕಂ ಕರ್ರಿ ಅದ್ಭುತವಾಗಿರುತ್ತದೆ. ಬೆಳಗಿನ ಉಪಹಾರಕ್ಕೂ, ರಾತ್ರಿ ಊಟಕ್ಕೂ ಸೂಕ್ತವಾಗಿದೆ.

# ಚಿಣ್ಣರ ಲೋಕ






**ಶ್ಲೋಕ್ ಚಿಂತಾಕುಂಟಾ**
ನ್ಯೂ ಜೆರ್ಸಿ

# ಯುಗಾದಿ


೧೦/೧೨/೨೦೨೫

ನನ್ನ ಇಷ್ಟವಾದ ಹಬ್ಬ ಯುಗಾದಿ. ಸಂಸ್ಕೃತ-ದಲ್ಲಿ, ಯುಗ ಅಂದರೆ year, ಮತ್ತು ಆದಿ ಅಂದರೆ beginning. ಯುಗಾದಿಯಲ್ಲಿ ಹೊಸ ಬಟ್ಟೆ ಹಾಕುತ್ತೇವೆ. ಎಣ್ಣೆ ಸ್ನಾನನೂ ಮಾಡುತ್ತೇವೆ. ಮನೆ ಮುಂದೆ ಬಣ್ಣ-ಬಣ್ಣದ ರಂಗೋಲಿ ಹಾಕುತ್ತೇವೆ. ಬೇವು-ಬೆಲ್ಲ mixture ತಿನ್ನುತ್ತೇವೆ. ಮನೆ ಬಾಗಿಲಿಗೆ ಮಾವಿನ ಎಲೆ ತೋರಣ ಹಾಕುತ್ತೇವೆ. ಹಬ್ಬದಲ್ಲಿ, ಬಾಳೆ-ಎಲೆ ಊಟ ತಿನ್ನುತ್ತೇವೆ.

- ಶ್ಲೋಕ್ ಚಿಂತಕುಂಟ
ಎಡಿಸನ್ ಶಾಲೆ
೧೧ ವರ್ಷ




**ವಿಭಾ ಕಾರ್ತೀಕ್**
ನ್ಯೂ ಜೆರ್ಸಿ




ವಿಭ ಕಾರ್ತೀಕ್
[illegible] ಬಿಲ್ಲ 1

ನನಗೆ ಸಾಫ್ಟ್‌ಬಾಲ್ ಆಡಲು ಇಷ್ಟ.
ನಾನು 5 ವರ್ಷದಿಂದಲೂ ಅದನ್ನು ಆಡುತ್ತಿದ್ದೇನೆ.
ನಾನು ಪಿಚರ್ ಮತ್ತು ಸೆಂಟರ್ ಫೀಲ್ಡ್ ಆಡುತ್ತೇನೆ.
ಆಟದ ಮೈದಾನದಲ್ಲಿ 10 ಆಟಗಾರರು ಇರುತ್ತಾರೆ.
ಸಾಫ್ಟ್‌ಬಾಲ್‌ನಲ್ಲಿ ಚೆಂಡುಗಳು ಹಳದಿ ಬಣ್ಣ ಇರುತ್ತವೆ ಮತ್ತು
ಬೇಸ್‌ಬಾಲ್ ಚೆಂಡುಗಳಿಗಿಂತ ದೊಡ್ಡದಾಗಿ ಇರುತ್ತವೆ.
Grand slam ಅಂದರೆ 3 ಬೇಸ್‌ಗಳು ಲೋಡ್ ಆಗಿರುವಾಗ,
home run ಹೊಡೆದರೆ. ಒಂದೇ ಹಿಟ್‌ನಲ್ಲಿ 4 ರನ್‌ಗಳು
ಸಿಗುತ್ತವೆ. ಇದು ತುಂಬಾ ಅಪರೂಪ.
Grand slam ಹೊಡೆಯಲು ತುಂಬಾ ಶಕ್ತಿ ಇರಬೇಕು.
Softball ಅಂದರೆ ಚೆಂಡನ್ನು ಹೊಡೆಯುವುದು ಮತ್ತು
enjoy ಮಾಡುವುದು.
ಹೀಗಾಗಿ ನಾನು ಅದನ್ನು ತುಂಬಾ ಸಮಯದಿಂದ
ಆಡುತ್ತಿದ್ದೇನೆ.

ವಿಭ ಕಾರ್ತಿಕ್



**ಹಿರಣ್ಮಯಿ ಯಮನಗಾರಿ**
ನ್ಯೂ ಜೆರ್ಸಿ




ದೀಪಾವಳಿ ಹಬ್ಬ

ದೀಪಾವಳಿ ಬೆಳಕಿನ ಹಬ್ಬ. ಎಲ್ಲರೂ ಮನೆಯ ಮುಂದೆ ಬಣ್ಣದ ರಂಗೋಲಿ ಹಾಕುತ್ತಾರೆ. ಈ ಹಬ್ಬಕ್ಕೆ ಹೊಸ ಬಟ್ಟೆ ಹಾಕುತ್ತಾರೆ. ಎಲ್ಲರೂ ಈ ಹಬ್ಬದಲ್ಲಿ ದೀಪಗಳನ್ನು ಎಲ್ಲಾಕಡೆಯಲ್ಲಿ ಇಡುತ್ತಾರೆ. ಎಲ್ಲರು ವಿಧ ವಿಧವಾದ ಸಿಹಿ ತಿಂಡಿ ಮಾಡುತ್ತಾರೆ. ಈ ಹಬ್ಬದ ವಿಶೇಷವಾದ ಸಿಹಿ ತಿಂಡಿ ಕಜ್ಜಾಯ. ಬಂಧು-ಮಿತ್ರರೊಂದಿಗೆ ಸೇರಿ ಊಟವನ್ನು ಮಾಡುತ್ತಾರೆ. ರಾತ್ರಿಯಲ್ಲಿ ಪಟಾಕಿಯನ್ನು ಹೊಡೆಯುತ್ತಾರೆ.

– Heeramai
age-11




**ರಾಹುಲ್ ಕೆಂಚೆಟ್ಟಿ**
ನ್ಯೂ ಜೆರ್ಸಿ



ನಾನು ಸಾಕರ್ ಆಟಕ್ಕೆ ಹೋದಾಗ
ನನ್ನ ಮನಸ್ಸು ನನ್ನ ಆಟದ ಮೇಲೆ
ಇತ್ತು. ನನಗೆ ಗೊತ್ತಿತ್ತು ಈ ತಂಡ ಚೆನ್ನಾಗಿತ್ತು.
ನನ್ನ ಕೋಚ್ ಗುರುವಿನ ಆಟಗಾರರನ್ನು
ಕರೆದಮೇಲೆ. ನಾನು ಯೋಚಿಸಿದೆ "ಇದು
ಕಷ್ಟ ಇರುತ್ತೆ" ಎಂದು. ಆಟ
ಆದಮೇಲೆ, ನನಗೆ ಗೊತ್ತಾಯಿತು
ಈ ತಂಡ ಚೆನ್ನಾಗಿರಲಿಲ್ಲ. ಹಾಗಾಗಿ ನಾವು
ತುಂಬ ಅಭ್ಯಾಸ ಮಾಡಿ ಚೆನ್ನಾಗಿ
ಆಡಲು ನಿರ್ಧಾರ ಮಾಡಿದ್ದೇವೆ.

ರಾಹುಲ್

**ಇಶಾನ್ ಚಂದ್ರ ಈಶ್ವರ್**
ನ್ಯೂ ಜೆರ್ಸಿ



# ಕ್ಯಾಮರಾ ಕಣ್ಣಲ್ಲಿ





**ಶ್ರೀವಿದ್ಯಾ ಪ್ರಶಾಂತ್**
ನ್ಯೂ ಜೆರ್ಸಿ









## ಶ್ರೀವಿದ್ಯಾ ಪ್ರಶಾಂತ್

ನ್ಯೂ ಜೆರ್ಸಿ







# ಬೃಂದಾವನ ವಾಣಿ ೫೩ನೆಯ ಸಂಚಿಕೆಯ ಬಗ್ಗೆ ಓದುಗರ ಅನಿಸಿಕೆ ಅಭಿಪ್ರಾಯಗಳು

- ವಾಣಿಯ 53ನೇ ಸಂಚಿಕೆ ವರ್ಣರಂಜಿತವಾಗಿ ಮೂಡಿಬಂದಿವೆ. ಸಂಚಿಕೆಯ ಎಲ್ಲ ಲೇಖನಗಳೂ ಬಹಳ ಆಪ್ತವಾಗಿವೆ, ಮತ್ತು ಅವು ಚೆನ್ನಾಗಿ ಓದಿಸಿಕೊಂಡು ಹೋದವು - Sathish Hosanagara

- Oh super.. eega nodide.. aavrutti chennagi bandide.. ಶುಭಾಶಯಗಳು ಮತ್ತು ಧನ್ಯವಾದಗಳು - Shyamsunder, Bengaluru

- Read your article in brindavana vani. very nice. Although I have never met him( S L Byrappa), my family has had several run-ins with him. my maternal grandfather was his teacher. his book Bhitti (autobiography) references him by name, and his gratitude to him. My father when he lived in Mysore, Byrappa was one of his hostel mates. he used to remember him and talk about him in my younger days. good memories.- Umesh bhatt

- ಭೈರಪ್ಪನವರಿಗೆ ಶ್ರದ್ಧಾಂಜಲಿ ಸೊಗಸಾಗಿದೆ. ಲೇಖಕರಿಗೆ ಅಭಿನಂದನೆಗಳನ್ನು ತಿಳಿಸಿ.ಬೃಂದಾವನ ವಾಣಿ ಸ್ವಾರಸ್ಯಕರವಾಗಿದೆ. ತಾಳ್ಮೆಯಿಂದ ಓದುವೆ. ನನ್ನ ಕವನಗಳನ್ನು ಸೇರಿಸಿದ್ದಕ್ಕೆ ಧನ್ಯವಾದಗಳು - Lakshminarayan, Bangalore

- One more beautiful edition ತುಂಬಾ ಚೆನ್ನಾಗಿ ಮೂಡಿ ಬಂದಿದೆ . ಭಾಸ್ಕರ್ article and Prasanna ಕವಿತೆ ಓದಿದೆ . ತುಂಬಾ ಚೆನ್ನಾಗಿದೆ. Will keep the rest for weekend reading . - Raghavendra Kundalagarki

- ಸುಮಾರು articles ಓದಿದೆ, ಬಹಳ ಚೆನ್ನಾಗಿದೆ - Anasuya from Bangalore.

- ಸಂಪಾದಕೀಯವನ್ನು ಮಹಿಳೆಯರೆ ನಿರ್ವಹಿಸಿರುವಿರಿ. ಅಭಿನಂದನೆಗಳು. “ಯಾಕೆ ಹೀಗೆ” ಲೇಖನ ಸಮಯೋಚಿತವಾಗಿದೆ. ಅಭಿನಂದನೆಗಳು. - L.N.Lakshminarayan.










ಬೃಂದಾವನ ವಾಣಿ ಹಿಂದಿನ ಸಂಚಿಕೆಗಳನ್ನು ಇಲ್ಲಿ ಓದಬಹುದು :
https://brindavana.org/brindavanavani/



**ನಿಮ್ಮ ಅನಿಸಿಕೆ, ಅಭಿಪ್ರಾಯಗಳನ್ನು ನಮಗೆ ಇಲ್ಲಿ ತಿಳಿಸಿ :**

**brindavanavani@gmail.com**

**ಮುಂದಿನ ಸಂಚಿಕೆಯಲ್ಲಿ ಸಿಗೋಣ...**